# ಶಾಲಾ ಶಿಕ್ಷಣಕ್ಕಾಗಿ

# ರಾಷ್ಟ್ರೀಯ

# ವ್ಯಾಸಂಗ ಕ್ರಮದ ಚೌಕಟ್ಟು

## ಪ್ರಧಾನ ಲಕ್ಷಣಗಳು ಮತ್ತು ಸಾರಾಂಶ

# ಶಾಲಾಶಿಕ್ಷಣಕ್ಕಾಗಿ ರಾಷ್ಟ್ರೀಯ ವ್ಯಾಸಂಗಕ್ರಮದ ಚೌಕಟ್ಟು
# ಪ್ರಧಾನ ಲಕ್ಷಣಗಳು ಮತ್ತು ಸಾರಾಂಶ

## ಪ್ರಧಾನ ಲಕ್ಷಣಗಳು:

ಶಿಕ್ಷಣಕ್ಷೇತ್ರದಲ್ಲಿ, ವಿಶೇಷವಾಗಿ ಶಾಲಾಶಿಕ್ಷಣದಲ್ಲಿ ಅನುಸರಿಸಬೇಕಾದ ನೀತಿ ಮತ್ತು ಕಾರ್ಯಕ್ರಮಗಳನ್ನು ರೂಪಿಸಿ, ಕಾರ್ಯಗತ ಮಾಡುವ ಕಾರ್ಯದಲ್ಲಿ ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಪರಿಷತ್ತು (National council of educational research and training- NCERT) ಸರ್ಕಾರಕ್ಕೆ ಸಲಹೆ ಮತ್ತು ಸಹಾಯ ನೀಡಬೇಕು. ಈ ನಿಟ್ಟಿನಲ್ಲಿ ಪರಿಷತ್ತು ಸುಮಾರು ಪ್ರತಿ ಹತ್ತುವರ್ಷಗಳಿಗೊಮ್ಮೆ ಶಾಲಾಶಿಕ್ಷಣದ ರಾಷ್ಟ್ರೀಯ ವ್ಯಾಸಂಗಕ್ರಮದ ಚೌಕಟ್ಟನ್ನು ರೂಪಿಸುತ್ತಾ ಬಂದಿದೆ. ರಾಷ್ಟ್ರದ ಮುಂದೆ ಇರುವ ಪ್ರಮುಖ ಕಳಕಳಿಗಳು ಮತ್ತು ಸಮಸ್ಯೆಗಳನ್ನು ಎದುರಿಸಲು ಅಗತ್ಯವಾದ ಸ್ಥೂಲ ಮಾರ್ಗದರ್ಶನಗಳನ್ನು ನೀಡುತ್ತಾ ಬಂದಿದೆ. ತರುವಾಯ ರಾಜ್ಯ ಸರ್ಕಾರಗಳು ತಮ್ಮ ರಾಜ್ಯದಲ್ಲಿ ವಿಸ್ತೃತ ವ್ಯಾಸಂಗವಿಷಯ, ಪಾಠಕ್ರಮ ಮತ್ತು ವ್ಯಾಸಂಗ ಸಾಮಗ್ರಿಗಳ ಬೆಳವಣಿಗೆಗಾಗಿ ಈ ವ್ಯಾಸಂಗಕ್ರಮದ ಮಾರ್ಗದರ್ಶನವನ್ನು ಅನುಸರಿಸುತ್ತ ಅಥವಾ ಅಳವಡಿಸಿಕೊಳ್ಳುತ್ತ ಬಂದಿವೆ.

ಪ್ರಸ್ತುತ ವ್ಯಾಸಂಗಕ್ರಮದ ಚೌಕಟ್ಟು ಪ್ರಾಥಮಿಕಪೂರ್ವ ಶಿಕ್ಷಣದಿಂದ ಹಿಡಿದು ಉನ್ನತ ಪ್ರೌಢಶಾಲಾಶಿಕ್ಷಣದವರೆಗಿನ ಎಲ್ಲಾ ಹಂತಗಳನ್ನೂ ಒಳಗೊಂಡಿದೆ. ಇದು ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಪರಿಷತ್ತು ವ್ಯಾಪಕವಾಗಿ ಮತ್ತು ತೀವ್ರವಾಗಿ ಅನೇಕಮಟ್ಟದಲ್ಲಿ ಕೈಗೊಂಡ ಸಮಾಲೋಚನೆ ಮತ್ತು ಚರ್ಚೆಗಳಿಂದ ರೂಪಿತವಾಗಿದೆ. ಈ ಉದ್ದೇಶಕ್ಕಾಗಿ ಎನ್ ಸಿ ಇ ಆರ್ ಟಿಯು ಸಂವಾದ ದಸ್ತಾವೇಜನ್ನು (Discussion document) ಹೊರತಂದಿತ್ತು. ಇದನ್ನು ಆಧಾರವಾಗಿಟ್ಟುಕೊಂಡು ಕೈಗೊಂಡ ಮುಕ್ತ ಪ್ರಜಾಸತ್ತಾತ್ಮಕ ರಾಷ್ಟ್ರೀಯ ಚರ್ಚೆ ಮತ್ತು ವಿಚಾರಸಂಕಿರಣಗಳ ಫಲವೇ ಈ ಶಾಲಾಶಿಕ್ಷಣ ವ್ಯಾಸಂಗಕ್ರಮ. ರಾಷ್ಟ್ರೀಯ ಚರ್ಚೆ ಮತ್ತು ವಿಚಾರಸಂಕಿರಣಗಳಲ್ಲಿ ಒಟ್ಟಾರೆ ಭಾರತೀಯ ಸಮಾಜದ ಎಲ್ಲ ವರ್ಗದ ಜನರೂ ಈ ವ್ಯಾಸಂಗಕ್ರಮ ಚೌಕಟ್ಟನ್ನು ರೂಪಿಸುವುದರಲ್ಲಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಭಾಗವಹಿಸಿದ್ದಾರೆ. ಅದರಲ್ಲಿ ಶಾಲಾಶಿಕ್ಷಣ ಮಂಡಳಿಗಳು, ರಾಜ್ಯಸರ್ಕಾರಗಳು, ಸ್ವಯಂಸೇವಾ ಸಂಸ್ಥೆಗಳ ಪ್ರತಿನಿಧಿಗಳು, ಹೆಸರಾಂತ ಶಿಕ್ಷಣ ತಜ್ಞರು, ಪರಿಣತರು, ಅಧ್ಯಾಪಕರು ಮತ್ತು ಅಧ್ಯಾಪಕ ಶಿಕ್ಷಕರು, ಪಾಲಕರು, ಹೀಗೆ ಒಟ್ಟಾರೆ ಇಡೀ ಜನಸಮುದಾಯವೇ ಸಮಾವೇಶಗೊಂಡಿದೆ.

ಈ ವ್ಯಾಸಂಗಕ್ರಮದ ಚೌಕಟ್ಟು ಅನೇಕ ಹೊಸ ಸಾಮಾಜಿಕ ಮತ್ತು ಶೈಕ್ಷಣಿಕ ಬದಲಾವಣೆಗೆ ಸ್ಪಂದಿಸುವುದರ ಜೊತೆಗೆ, ೧೯೮೬ರಲ್ಲಿ ರೂಪಿತವಾದ ಮತ್ತು ೧೯೯೨ರಲ್ಲಿ ಪರಿಷ್ಕರಣಗೊಂಡ ರಾಷ್ಟ್ರೀಯ ಶಿಕ್ಷಣ ನೀತಿಯ ವಿಶಾಲವಾದ ವ್ಯಾಪ್ತಿಗೆ ಒಳಪಟ್ಟಿದೆ. ಹೊಸ ಚೌಕಟ್ಟಿಗೆ ಅಡಿಪಾಯ ಒದಗಿಸುವ ಕೆಲವು ಹೊಸ ಆಸಕ್ತ ವಿಷಯಗಳು ಹೀಗಿವೆ:

- ಔಚಿತ್ಯ, ಸಮತೆ ಮತ್ತು ಶ್ರೇಷ್ಠತೆಯ ಆಧಾರಸ್ತಂಭಗಳ ಮೇಲೆ ನಿಂತ ಸುಸಂಗತ ಸಮಾಜ ರಚನೆ.

- ದೇಶೀಯ ಜ್ಞಾನವನ್ನು ಸುಸಂಘಟಿಸುವುದು ಮತ್ತು ವಿಶ್ವ ನಾಗರಿಕತೆಗಳಿಗೆ ಭಾರತದ ಕೊಡುಗೆಯನ್ನು ಗುರುತಿಸುವುದು.
- ಭಾರತೀಯನಾಗಿರುವುದು ಹೆಮ್ಮೆಯ ವಿಷಯವೆಂಬುದನ್ನು ಬೋಧಿಸುವುದು ಮತ್ತು ಬಲಪಡಿಸುವುದು.
  ವಸುಧೈವ ಕುಟುಂಬಕಂ ಎಂಬ ಭಾವೋತ್ಸಾಹದ ವ್ಯಾಪ್ತಿಗೆ ಒಳಪಡುವಂತಹ ರಾಷ್ಟ್ರಪ್ರೇಮ ಮತ್ತು ರಾಷ್ಟ್ರೀಯಭಾವನೆಯನ್ನು ಬೆಳೆಸುವುದು.
- ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸುವುದು ಮತ್ತು ಶಿಕ್ಷಣಕ್ಕೂ ಬದುಕಿನ ಕೌಶಲಗಳಿಗೂ ಸಂಬಂಧ ಕಲ್ಪಿಸುವುದು.
- ಶಾಲಾಶಿಕ್ಷಣದ ಎಲ್ಲ ಹಂತಗಳಲ್ಲಿ ಮೌಲ್ಯಗಳನ್ನು ಬೆಳೆಸುವುದು.
- ಮಾಹಿತಿ ಮತ್ತು ಸಂಪರ್ಕತಂತ್ರಜ್ಞಾನ ಮತ್ತು ಜಾಗತೀಕರಣದ ಸವಾಲುಗಳನ್ನು ಎದುರಿಸುವುದು.
- ವ್ಯಾಸಂಗ ಕ್ರಮದ ಹೊರೆ ಇಳಿಸುವುದು.
- ಸಂಸ್ಕೃತಿ ನಿರ್ದಿಷ್ಟ ಬೋಧನಾವಿಧಾನವನ್ನು ಬಳಸುವುದು.
- ಮಗುವನ್ನು ಜ್ಞಾನದ ಶಿಲ್ಪಿಯೆಂದು ಪರಿಗಣಿಸುವುದು.
- ಬುದ್ಧಿ, ಭಾವ ಮತ್ತು ಕ್ರಿಯೆಗಳ ನಡುವೆ ಪರಸ್ಪರ ಹೊಂದಾಣಿಕೆ ಕಲ್ಪಿಸುವುದು.
- ವ್ಯಾಸಂಗ ಕ್ರಮವನ್ನು ರೂಪಿಸುವುದರಲ್ಲಿ ಮತ್ತು ಅದನ್ನು ಕಾರ್ಯರೂಪಕ್ಕೆ ತರುವಲ್ಲಿ ಶಿಕ್ಷಕರಿಗೆ ಅಧಿಕಾರವನ್ನು ನೀಡುವುದು.
- ವ್ಯಾಸಂಗ ಕ್ರಮವನ್ನು ರೂಪಿಸುವ ಪ್ರಕ್ರಿಯೆಯನ್ನು ವ್ಯವಸ್ಥಿತವಾಗಿ ವಿಕೇಂದ್ರೀಕರಿಸುವುದು.

ವಿವಿಧ ಹಂತಗಳಲ್ಲಿ ಶಾಲಾಶಿಕ್ಷಣದ ಗುಣಾತ್ಮಕ ಅಭಿವೃದ್ಧಿಗೆ ಸಂಬಂಧಿಸಿದಂತೆ ಮಾಡಿರುವ ಮುಖ್ಯ ಶಿಫಾರಸುಗಳು ಹೀಗಿವೆ:

- ದೇಶದ ಎಲ್ಲ ಮಕ್ಕಳಿಗೂ ಪ್ರಾಥಮಿಕ ಪೂರ್ವಶಿಕ್ಷಣದ ಅವಕಾಶವು ಲಭಿಸುವಂತೆ ದೃಢೀಕರಿಸಿಕೊಳ್ಳಬೇಕು. ಆ ಮಟ್ಟದಲ್ಲಿ ಔಪಚಾರಿಕ ಬೋಧನೆಯನ್ನು ಮತ್ತು ಬೇರೆ ಬೇರೆ ವಿಷಯಗಳಿಗೆ ಪರೀಕ್ಷೆ ನಡೆಸುವುದನ್ನು ನಿಷೇಧಿಸಬೇಕು.
- ಪ್ರಾಥಮಿಕ ಹಂತದ ಮೊದಲ ಎರಡು ವರ್ಷಗಳಲ್ಲಿ ಭಾಷೆ,ಗಣಿತಶಾಸ್ತ್ರ ಮತ್ತು ಇತರ ಚಟುವಟಿಕೆಗಳ ಜೊತೆ ಪರಿಸರಶಿಕ್ಷಣವನ್ನು ಸಂಯೋಜಿಸಬೇಕು.
- ಆರೋಗ್ಯಕರ ಹಾಗೂ ಫಲಪ್ರದ ಜೀವನ ನಡೆಸುವುದಕ್ಕೆ ಬೇಕಾದ ಕಲಾ ಶಿಕ್ಷಣ, ಆರೋಗ್ಯ ಶಿಕ್ಷಣ, ದೈಹಿಕ ಶಿಕ್ಷಣ ಮತ್ತು ಕಸುಬುಗಾರಿಕೆಯ ಶಿಕ್ಷಣವನ್ನು ಪ್ರಾಥಮಿಕ ಹಂತದಲ್ಲಿ ಸಂಯೋಜಿಸಬೇಕು.
- ಶಾಲಾಶಿಕ್ಷಣದ ಎಲ್ಲ ಹಂತಗಳಲ್ಲಿ ಧರ್ಮಗಳ ಬಗೆಗೆ ಮತ್ತು ಎಲ್ಲ ಧರ್ಮಗಳಲ್ಲಿ ಅಂತರ್ಗತವಾಗಿರುವ ಮೌಲ್ಯಗಳ ಬಗೆಗೆ ಶಿಕ್ಷಣ ನೀಡಬೇಕು.
- ಪ್ರೌಢಶಾಲೆಯ ಹಂತದವರೆಗೆ ವಿಜ್ಞಾನ ಮತ್ತು ತಂತ್ರಜ್ಞಾನಗಳ ಶಿಕ್ಷಣವನ್ನು ಅಳವಡಿಸಬೇಕು.
- ಪ್ರೌಢಶಾಲೆಯ ಹಂತದವರೆಗೆ ಗಣಿತಶಾಸ್ತ್ರವನ್ನು ಜೀವನಕ್ಕೆ ಸಮೀಪವಾಗಿರುವಂತೆ ಮಾಡಬೇಕು ಮತ್ತು ಪ್ರಾಯೋಗಿಕ ಗಣಿತಶಾಸ್ತ್ರಾಧ್ಯಯನಕ್ಕಾಗಿ ಈಗಾಗಲೇ ಇರುವ ಪ್ರಯೋಗಶಾಲೆಯಲ್ಲಿ ಗಣಿತಶಾಸ್ತ್ರಕ್ಕೆ ಒಂದು ಪ್ರತ್ಯೇಕ ಸ್ಥಳಾವಕಾಶ ಕಲ್ಪಿಸಿಕೊಡಬೇಕು.

* ಪ್ರೌಢಶಾಲೆಯ ಹಂತದವರೆಗೆ ಸಮಾಜವಿಜ್ಞಾನಗಳ ಶಿಕ್ಷಣ ನೀಡಲು ಸಂಯೋಜಿತ ವಿಷಯಪ್ರಧಾನ ಮಾರ್ಗವನ್ನು ಅನುಸರಿಸಬೇಕು.

- ತ್ರಿಭಾಷಾಸೂತ್ರದ ಮೂಲಭೂತ ನೀತಿಯನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಮತ್ತು ಹಿಂದಿ ಭಾಷೆಯನ್ನು ಭಾರತದ ಅಧಿಕೃತ ಭಾಷೆಯನ್ನಾಗಿಯೂ ಸಂಸ್ಕೃತವನ್ನು ಪರಂಪರಾನುಗತ ಜ್ಞಾನ ಮತ್ತು ದೇಶದ ಸಾಂಸ್ಕೃತಿಕ ಭಾಷೆಯನ್ನಾಗಿಯೂ ಬೋಧಿಸಬೇಕು.
- ಪ್ರೌಢಶಾಲಾ ಮತ್ತು ಉನ್ನತ ಪ್ರೌಢಶಾಲಾ ಹಂತಗಳಲ್ಲಿ ಷಾಣ್ಮಾಸಿಕ ಶಿಕ್ಷಣ ಪದ್ಧತಿಯನ್ನು ಜಾರಿಗೊಳಿಸುವುದಕ್ಕೆ ಒತ್ತುನೀಡಬೇಕು.
- ಉನ್ನತ ಪ್ರೌಢಶಾಲಾ ಹಂತದಲ್ಲಿ ನೀಡಬೇಕಾಗಿರುವ ಕೋರ್ಸುಗಳಲ್ಲಿ ಹೆಚ್ಚಿನ ಅವಕಾಶಗಳು ಇರಬೇಕು. ವಿದ್ಯಾರ್ಥಿಗೆ ಬೇಕಾದ ವಿಷಯಗಳನ್ನು ಆಯ್ಕೆಮಾಡಿಕೊಳ್ಳುವ ಸ್ವಾತಂತ್ರ್ಯವಿರಬೇಕು.
- ಉನ್ನತ ಪ್ರೌಢಶಾಲಾ ಹಂತದಲ್ಲಿ ಉದ್ಯೋಗವಕಾಶ ಕಲ್ಪಿಸಲು ಬೇಕಾಗುವ ಮತ್ತು ಉದ್ಯಮಶೀಲತೆಯನ್ನು ಹೆಚ್ಚಿಸಲು ಬೇಕಾಗುವ ಶಕ್ತಿಯುತವಾದ ಔದ್ಯೋಗಿಕ ಶಿಕ್ಷಣವ್ಯವಸ್ಥೆಯನ್ನು ರೂಪಿಸಬೇಕು.
- ಉನ್ನತ ಪ್ರೌಢಶಾಲಾಹಂತದಲ್ಲಿ ಸಾಮಾನ್ಯ ಶಿಕ್ಷಣ ಮತ್ತು ವಿಶೇಷ ಐಚ್ಛಿಕ ಭಾಷಾ ಕೋರ್ಸುಗಳಿಗೆ ಅವಕಾಶ ಮಾಡಿಕೊಡಬೇಕು.
- ಮಾನವೀಯವಾದ, ವಿದ್ಯಾರ್ಥಿ ಸೌಹಾರ್ದಯುತವಾದ, ದೋಷರಹಿತವಾದ, ಸಂವೇದನಾಶೀಲವಾದ ಮತ್ತು ಪಾರದರ್ಶಕವಾದ ಮೌಲ್ಯಮಾಪನ ವಿಧಾನವನ್ನು ರೂಪಿಸಬೇಕು.
- ಹತ್ತನೇ ತರಗತಿಯವರೆಗೆ ಬಾಹ್ಯಪರೀಕ್ಷಾ ಬಾಹುಳ್ಯವನ್ನು ಕಡಮೆಮಾಡಿ ಉತ್ತೀರ್ಣ ಮತ್ತು ಅನುತ್ತೀರ್ಣ ಎಂಬ ವರ್ಗೀಕರಣವನ್ನು ತೆಗೆದುಹಾಕಬೇಕು.
- ಪಠ್ಯವಿಷಯ ಮತ್ತು ಸಹಪಠ್ಯವಿಷಯ ಅಧ್ಯಯನಕ್ಕೆ ದರ್ಜೆನಮೂದಿಸುವಲ್ಲಿ ಬೇರೆ ಬೇರೆ ವಿಧಾನಗಳನ್ನು ಅನುಸರಿಸಬೇಕು.
- ವಿಶೇಷ ಆವಶ್ಯಕತೆಯಿರುವ ವಿದ್ಯಾರ್ಥಿಗಳಿಗೆ ಪರ್ಯಾಯ ಮೌಲ್ಯಮಾಪನ ವಿಧಾನ ಅನುಸರಿಸಬೇಕು.

ವ್ಯಾಸಂಗಕ್ರಮದ ಚೌಕಟ್ಟನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ಸಲುವಾಗಿ ಕೆಳಕಂಡ ನಿರ್ದಿಷ್ಟ ಶಿಫಾರಸುಗಳನ್ನು ಮಾಡಲಾಗಿದೆ:

- ಅಧ್ಯಾಪಕರು, ಪೋಷಕರು, ಸಮುದಾಯ ಮತ್ತು ಕಾರ್ಯಕ್ರಮದ ನಿರ್ವಹಣಾಧಿಕಾರಿಗಳಿಗೆ ವಿಷಯ ಪರಿಚಯ ಮಾಡುವುದಕ್ಕೆ, ಅವರು ಭಾಗವಹಿಸುವಂತಾಗುವುದಕ್ಕೆ ಮತ್ತು ಅವರು ಕಾರ್ಯಕ್ರಮಕ್ಕೆ ಪ್ರಾಮಾಣಿಕವಾಗಿರುವಂತೆ ಮಾಡುವುದಕ್ಕೆ ಸೂಕ್ತವಾದ ಕಾರ್ಯಕ್ರಮ ಅನುಷ್ಠಾನ ಮಾರ್ಗೋಪಾಯಗಳನ್ನು ಅಳವಡಿಸಿಕೊಳ್ಳುವುದು.

- ಮೌಲ್ಯಗಳ ಸಂವರ್ಧನೆಗಾಗಿ ನಿರ್ದಿಷ್ಟ ಅನುಷ್ಠಾನ ಮಾರ್ಗೋಪಾಯಗಳನ್ನು ಸಲಹೆಮಾಡುವುದು. ವಿಭಿನ್ನ ಸವಾಲುಗಳನ್ನು ಎದುರಿಸುತ್ತಿರುವ ವಿದ್ಯಾರ್ಥಿಗಳು ಪ್ರಧಾನ ಶಿಕ್ಷಣಧಾರೆಯಲ್ಲಿ ಬರುವಂತೆ ದೃಢೀಕರಿಸಿಕೊಳ್ಳುವುದು. ದೇಶದ ಶೈಕ್ಷಣಿಕ ಗುರಿ ಸಾಧಿಸಲು ಬೇಕಾದ ಸಂಪನ್ಮೂಲಗಳನ್ನು ಕ್ರೋಡೀಕರಿಸುವುದು.

**ಸಾರಾಂಶ :**

ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಪರಿಷತ್ತು (NCERT) ಶಿಕ್ಷಣ ಕ್ಷೇತ್ರದಲ್ಲಿ ವಿಶೇಷವಾಗಿ ಶಾಲಾ ಶಿಕ್ಷಣದಲ್ಲಿ ಅನುಷ್ಠಾನಕ್ಕೆ ತರಬೇಕಾದ ಶೈಕ್ಷಣಿಕ ನೀತಿ ಮತ್ತು ಕಾರ್ಯಕ್ರಮಗಳನ್ನು ರೂಪಿಸುವುದಕ್ಕೆ ಬೇಕಾದ ಸಲಹೆ ಮತ್ತು ಸಹಾಯಗಳನ್ನು ಭಾರತ ಸರ್ಕಾರಕ್ಕೆ ನೀಡುತ್ತದೆ.ಇದು ಈ ದೇಶಕ್ಕೆ ಬೇಕಾದ ಮಾದರಿ ಶಾಲಾ ವ್ಯಾಸಂಗಕ್ರಮವನ್ನು ಸಿದ್ಧಪಡಿಸುವ ಕಾರ್ಯದಲ್ಲಿ ತೊಡಗಿದ್ದು ಈ ವ್ಯಾಸಂಗಕ್ರಮವು ಈ ದೇಶದ ಜನರ ಬೇಡಿಕೆ ಮತ್ತು ಬಯಕೆಗಳಿಗೆ ಸೂಕ್ತವಾಗಿ ಪ್ರತಿಸ್ಪಂದಿಸುವಂತಿದೆ. ಹೀಗಾಗಿ ಸುಮಾರು ಹತ್ತು ವರ್ಷಗಳಿಗೊಮ್ಮೆ ಎನ್ ಸಿ ಇ ಆರ್ ಟಿಯು ದೇಶದ ಮುಂದಿರುವ ಪ್ರಮುಖ ಕಳಕಳಿಗಳು ಮತ್ತು ಸಮಸ್ಯೆಗಳನ್ನು ಗಮನದಲ್ಲಿಟ್ಟುಕೊಂಡು ಶಾಲಾಶಿಕ್ಷಣಕ್ಕಾಗಿ ರಾಷ್ಟ್ರೀಯ ಶೈಕ್ಷಣಿಕ ವ್ಯಾಸಂಗಕ್ರಮದ ಚೌಕಟ್ಟನ್ನು ರೂಪಿಸುತ್ತಾ ಬಂದಿದೆ. ಆದಾದನಂತರ ರಾಜ್ಯಗಳು ಈ ರಾಷ್ಟ್ರೀಯ ಶೈಕ್ಷಣಿಕ ವ್ಯಾಸಂಗಕ್ರಮದ ಮಾರ್ಗದರ್ಶನಗಳನ್ನು ತಮಗೆ ಬೇಕಾದಹಾಗೆ ಪರಿಷ್ಕರಿಸಿಕೊಂಡು ಅಥವಾ ಅಳವಡಿಸಿಕೊಂಡು ತಮ್ಮದೇ ಆದ ಪಠ್ಯಕ್ರಮ ಮತ್ತು ವ್ಯಾಸಂಗಕ್ರಮದ ಸಾಮಗ್ರಿಗಳನ್ನು ತಯಾರಿಸಿಕೊಳ್ಳುವ ಸ್ವಾತಂತ್ರ್ಯ ಹೊಂದಿವೆ.

ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಪರಿಷತ್ತು ೧೯೯೯ರಲ್ಲಿ ಹೊಸ ವ್ಯಾಸಂಗಕ್ರಮದ ಚೌಕಟ್ಟನ್ನು ರೂಪಿಸುವ ಸಾಹಸ ಕಾರ್ಯಕ್ಕೆ ಕೈಹಾಕಿತು. ಅದರ ಪರಿಣಾಮವಾಗಿ ಶಾಲಾಶಿಕ್ಷಣದ ರಾಷ್ಟ್ರೀಯ ವ್ಯಾಸಂಗಕ್ರಮದ ಚೌಕಟ್ಟು- ೨೦೦೦ ಎಂಬುದನ್ನು ಹೊರತಂದಿದೆ. ಇದು ಐದು ಅಧ್ಯಾಯಗಳನ್ನೊಳಗೊಂಡಿದೆ.

**ಅಧ್ಯಾಯ ೧ :** ಇದು ರಾಷ್ಟ್ರಕ್ಕೆ ಸಂಬಂಧಿಸಿದ ಇಂದಿನ ಮತ್ತು ನಾಳಿನ ಸಂದರ್ಭ ಮತ್ತು ಸಮಸ್ಯೆಗಳನ್ನು ಕುರಿತು ಪ್ರಸ್ತಾಪಿಸುತ್ತದೆ. ಅನೇಕ ವರ್ಷಗಳಿಂದ ನಡೆದು ಬಂದಿರುವ ಪ್ರಾಚೀನ, ಮಧ್ಯಕಾಲೀನ ಮತ್ತು ಆಧುನಿಕ ಕಾಲಗಳ ಸಂಕ್ಷಿಪ್ತ ಶೈಕ್ಷಣಿಕ ಚರಿತ್ರೆ ಕಳೆದ ಐವತ್ತು ವರ್ಷಗಳಿಂದ ದೇಶದ ಸಮಾಜೋಸಾಂಸ್ಕೃತಿಕ ಸನ್ನಿವೇಶವನ್ನು ಅರ್ಥಮಾಡಿಕೊಳ್ಳಲು ಹಾಗೂ ಮೆಚ್ಚಿಕೊಳ್ಳಲು ಬೇಕಾದ ಪೀಠಿಕೆಯನ್ನೊದಗಿಸುತ್ತದೆ. ಸ್ವಾತಂತ್ರ್ಯೋತ್ತರ ಭಾರತದ ಶಾಲಾ ಶಿಕ್ಷಣದ ಚಿತ್ರಣದ ಸಂಕ್ಷಿಪ್ತ ವಿವರಗಳನ್ನು ಕೊಡುವುದರ ಜೊತೆಗೆ, ಶಾಲಾ ವ್ಯಾಸಂಗಕ್ರಮ ಐತಿಹಾಸಿಕವಾಗಿ ಬೆಳೆದುಬಂದಿರುವ ವಿವರಗಳನ್ನು ಕೊಟ್ಟಿರುವುದರಿಂದ ಆ ಅವಧಿಯಲ್ಲಿ ಆಗಿರಬಹುದಾದ ಬದಲಾವಣೆಗಳನ್ನು ಅರ್ಥಮಾಡಿಕೊಳ್ಳಲು ಸಹಾಯವಾಗುತ್ತದೆ. ಈ ಹಿನ್ನೆಲೆಯಲ್ಲಿ ವ್ಯಾಸಂಗಕ್ರಮದ ಸಮಸ್ಯೆಗಳನ್ನು ವಿಸ್ತೃತವಾಗಿ ಪ್ರಸ್ತಾಪಿಸಲಾಗಿದ್ದು ಅವುಗಳು ಪ್ರಾಥಮಿಕ, ಪ್ರೌಢ ಮತ್ತು ಉನ್ನತ ಪ್ರೌಢ ಶಿಕ್ಷಣದ ಹಂತದಲ್ಲಿ ಸೂಕ್ತವಾಗಿ ಪ್ರತಿಫಲನಗೊಂಡಿರಬೇಕಾಗುತ್ತದೆ. ವ್ಯಾಸಂಗಕ್ರಮದ ಬೆಳವಣಿಗೆ ಒಂದು ಚೈತನ್ಯಶೀಲ ಪ್ರಕ್ರಿಯೆಯಾಗಿದ್ದು ಶೀಘ್ರವಾಗಿ ಬದಲಾಗುತ್ತಿರುವ ಸಮಾಜಕ್ಕೆ ಸಹಸ್ಪಂದಿಯಾಗಬೇಕಾಗುತ್ತದೆ. ಇದು ಅಸಮಾನತೆಯನ್ನು ಕಡಿಮೆಗೊಳಿಸುವ, ವಿದ್ಯಾರ್ಥಿಗಳ ಮತ್ತು ಸಮಾಜದ ಸಮಸ್ಯೆಗಳಿಗೆ ಪ್ರತಿಸ್ಪಂದಿಸುವ ಹಾಗೂ ಶ್ರೇಷ್ಠತೆಯನ್ನು ಬೆಳೆಸುವ ಶೈಕ್ಷಣಿಕ ವ್ಯವಸ್ಥೆಯೊಂದಕ್ಕೆ ದಾರಿಮಾಡಿಕೊಡುತ್ತದೆ. ಅಂದರೆ, ವ್ಯಾಸಂಗಕ್ರಮವು ಔಚಿತ್ಯ, ಸಮಾನತೆ ಮತ್ತು ಶ್ರೇಷ್ಠತೆಗಳೆಂಬ ಮೂರು

ಆಧಾರಸ್ತಂಭಗಳ ಮೇಲೆ ನಿಂತಿರಬೇಕು. ಆದ್ದರಿಂದ ವ್ಯಾಸಂಗಕ್ರಮದ ಮುಖ್ಯ ಕಳಕಳಿಯೆಂದರೆ ಸುಸಂಗತ ಸಮಾಜಕ್ಕೆ ಬೇಕಾದ ಶಿಕ್ಷಣವನ್ನು ಒದಗಿಸುವುದು. ಅದರಿಂದಾಗಿ ಸಮಾನ ಅವಕಾಶ ಮತ್ತು ಹೆಣ್ಣುಮಕ್ಕಳೂ ಸೇರಿದಂತೆ ವಿಶೇಷ ಅಗತ್ಯಗಳಿಗಾಗಿ ಕಲಿಯುವವರು, ದುರ್ಬಲವರ್ಗದಿಂದ ಬಂದವರು ಮುಂತಾದ ಭಿನ್ನ ಗುಂಪುಗಳಿಗೆ ಗುಣಾತ್ಮಕ ಶಿಕ್ಷಣದ ಅವಕಾಶ ಸಿಗುವುದನ್ನು ದೃಢೀಕರಿಸಿಕೊಳ್ಳಲಾಗುತ್ತದೆ.

ರಾಷ್ಟ್ರೀಯತ್ವವನ್ನು ಬಲಪಡಿಸುವುದು, ಸಾಂಸ್ಕೃತಿಕ ಪರಂಪರೆಯನ್ನು ದೃಢಪಡಿಸುವುದು ಹಾಗೂ ಸ್ಥಳೀಯ ಜ್ಞಾನ ಮೂಲಗಳನ್ನು ಸಂಯೋಜಿಸುವುದು ಮತ್ತು ಮನುಕುಲಕ್ಕೆ ಭಾರತದ ಕೊಡುಗೆಯನ್ನು ಗುರುತಿಸುವುದು ವ್ಯಾಸಂಗಕ್ರಮದ ಇನ್ನಿತರ ಕಳಕಳಿಗಳಾಗಿವೆ.

ಇಂದು ಜಾಗತೀಕರಣಯುಗದೊಂದಿಗೆ ಸ್ಪಂದಿಸುವುದರೊಂದಿಗೆ ಕೂಡಿಬಾಳುವುದಕ್ಕೆ ಮತ್ತು ದುಡಿಯುವುದಕ್ಕೆ ಹಾಗೂ ಅದರ ಅಭಿವೃದ್ಧಿಗೆ ಬೇಕಾದ ಮಾರ್ಗಗಳನ್ನು ತಿಳಿದುಕೊಳ್ಳುವುದಕ್ಕೆ ಪ್ರಾಶಸ್ತ್ಯ ಹೆಚ್ಚಿದೆ. ಉತ್ಸಾಹಶೀಲ ಸಮಾಜವೊಂದನ್ನು ಕಟ್ಟುವಾಗ ಮಾಹಿತಿ ಮತ್ತು ಸಂವಹನಾ ತಂತ್ರಜ್ಞಾನ, ಶಿಕ್ಷಣವನ್ನು ಬದುಕಿನ ಕೌಶಲದೊಂದಿಗೆ ಬೆಸೆಯುವುದು, ಶಿಕ್ಷಣವನ್ನು ಮೌಲ್ಯಗಳ ಬೆಳೆವಣಿಗೆಗೆ ಬಳಸುವುದು, ಮುಂತಾದ ಸವಾಲುಗಳನ್ನು ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ. ಇಂದು ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ ಒಂದು ಸಮಸ್ಯೆಯಾಗಿಯೇ ಉಳಿದಿದೆ. ಈ ಬದ್ಧತೆಯನ್ನು ಆದಷ್ಟೂ ಬೇಗ ಪೂರೈಸಬೇಕಾಗಿದೆ. ಈ ದೆಸೆಯಲ್ಲಿ ಮುಕ್ತ ಮತ್ತು ಪರ್ಯಾಯ ಶಿಕ್ಷಣದ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ನಮ್ಮ ಮುಂದಿರುವ ಪ್ರಮುಖ ಸವಾಲೆಂದರೆ ವ್ಯಾಸಂಗಕ್ರಮದ ಹೊರೆಯನ್ನು ಹೆಚ್ಚಿಸದೆ ವಿಭಿನ್ನ ವ್ಯಾಸಂಗಕ್ರಮದ ಕಳಕಳಿಗಳನ್ನು ಒಟ್ಟಿಗೆ ತರುವುದು ಹಾಗೂ ಅದೇ ಸಮಯದಲ್ಲಿ ಅವು ಔಚಿತ್ಯಪೂರ್ಣ ಮತ್ತು ಪರಿಣಾಮಕಾರಿಯಾಗುವಂತೆ ನೋಡಿಕೊಳ್ಳುವುದು. ಶಿಕ್ಷಣ ಮತ್ತು ಉದ್ಯೋಗಗಳ ನಡುವೆ ಸಂಪರ್ಕ ಸಾಧಿಸುವುದು ಮತ್ತೊಂದು ಸವಾಲು. ಅದಕ್ಕಾಗಿ ಸ್ಥಳೀಯ ಅಗತ್ಯ ಮತ್ತು ಸಂಪನ್ಮೂಲಗಳನ್ನು ಆಧರಿಸಿದ ಎದ್ದುಕಾಣುವ ಸುಸಂಗತ ಕಾರ್ಯಕ್ರಮಗಳನ್ನು ರೂಪಿಸಬೇಕಾಗುತ್ತದೆ. ವ್ಯಾಸಂಗಕ್ರಮದ ಹೊರೆಯ ಸಮಸ್ಯೆಯನ್ನು ಅತ್ಯಂತ ಪ್ರಾಮಾಣಿಕವಾಗಿ ಪರಿಹರಿಸುವ ಕಾರ್ಯವನ್ನು ಮಾಡಬೇಕಾಗಿದೆ. ಕಾಲದಿಂದ ಕಾಲಕ್ಕೆ ವ್ಯಾಸಂಗಕ್ರಮವನ್ನು ಪರಿಷ್ಕರಿಸುವುದರ ಜೊತೆಗೆ, ಒಂದು ಕಡೆ ಮಕ್ಕಳ ಅಭಿವೃದ್ಧಿಸಾಮರ್ಥ್ಯಗಳ ಮಧ್ಯೆ ಇರುವ ಅಸಮತೋಲನವನ್ನೂ ಮತ್ತೊಂದುಕಡೆ ವ್ಯಾಸಂಗಕ್ರಮದ ನಿರೀಕ್ಷೆ ಮತ್ತು ಬೋಧನಾ ಕಲಿಕಾವಿಧಾನಗಳ ಮಧ್ಯೆ ಇರುವ ಅಸಮತೋಲನವನ್ನೂ ನಿವಾರಿಸುವುದರಿಂದ ಹೊರೆಯನ್ನು ಸಾಕಷ್ಟು ಪ್ರಮಾಣದಲ್ಲಿ ಕಡಿಮೆ ಮಾಡಬಹುದು. ಮಕ್ಕಳು ಜ್ಞಾನಗ್ರಹಿಕೆಯ ಮಾದರಿಯಲ್ಲಿ ಕಲಿಯುವುದಕ್ಕಿಂತ ರಚನಾತ್ಮಕ ಮಾದರಿಯಲ್ಲಿ ಕಲಿಯುವಂತಾದರೆ, ಅದು ಮಕ್ಕಳಿಗೆ ತಮ್ಮ ಸಾಮಾಜಿಕ ಅನುಭವದ ಮೂಲಕ ಜ್ಞಾನ ಪಡೆದುಕೊಳ್ಳುವುದಕ್ಕೆ ಬೇಕಾದ ವಿಶಾಲ ವ್ಯಾಪ್ತಿಯನ್ನು ಒದಗಿಸುತ್ತದೆ. ಈ ಕಲಿಕಾ ಮಾರ್ಗ ಮಗು ಸಕ್ರಿಯವಾಗಿ ಕಲಿಯುವುದಕ್ಕೆ ಸಹಾಯ ಮಾಡುತ್ತದೆ. ಕಲಿಯುವವರ ಸರ್ವತೋಮುಖ ಬೆಳವಣಿಗೆಗಾಗಿ ಬುದ್ಧಿ, ಭಾವ ಮತ್ತು ಕ್ರಿಯೆಗಳ ಮಧ್ಯೆ ಅಂತರ್ಸಂಬಂಧವನ್ನು ಸಾಧಿಸುವುದು ಅತ್ಯಾವಶ್ಯಕ. ಪರಂಪರಾಗತ ಬುದ್ಧಿವಂತಿಕೆಯ ಪರಿಕಲ್ಪನೆಗಿಂತ ಭಿನ್ನವಾದ ಬಹುಮುಖ ಬುದ್ಧಿವಂತಿಕೆಯ ಪರಿಕಲ್ಪನೆ ಇಂದು ನೆಲೆಯೂರಿದೆ. ಇವೆಲ್ಲ ವ್ಯಾಸಂಗಕ್ರಮವನ್ನು ರೂಪಿಸುವಾಗ ಅದರಲ್ಲಿ ಸ್ಥಾನ ಪಡೆದುಕೊಳ್ಳಬೇಕು. ಸಂಸ್ಕೃತಿ ನಿರ್ದಿಷ್ಟ ಶೈಕ್ಷಣಿಕಾಂಶಗಳು, ಸದಭಿರುಚಿಯ ಸಂವೇದನೆಗಳು, ನಿರಂತರ ಮತ್ತು ಸಮಗ್ರ ಮೌಲ್ಯಮಾಪನ, ವ್ಯಾಸಂಗಕ್ರಮವನ್ನು ಶಿಕ್ಷಕರೇ ಅಭಿವೃದ್ಧಿಪಡಿಸುವುದಕ್ಕೆ ನೀಡಬೇಕಾದ ಅಧಿಕಾರ, ಕಾರ್ಯಶೀಲ ವ್ಯವಹಾರಗಳು ಮತ್ತು ಮೌಲ್ಯಮಾಪನ ಇವೇ ಮುಂತಾದ ಅಂಶಗಳನ್ನು ವ್ಯಾಪಕ ಕ್ರಮದಲ್ಲಿ ಪ್ರಸ್ತಾಪಿಸಬೇಕಾಗುತ್ತದೆ.

ಶಿಕ್ಷಣವನ್ನು ಆಜೀವ ಪ್ರಕ್ರಿಯೆಯಾಗಿ ಪರಿಗಣಿಸಬೇಕು. ತ್ವರಿತಗತಿಯಲ್ಲಿ ಬದಲಾಗುತ್ತಿರುವ ಜಗತ್ತಿನಲ್ಲಿ ಹೊಸ ಬೆಳವಣಿಗೆಗಳು ತ್ವರಿತವಾಗಿ ವ್ಯಾಸಂಗಕ್ರಮದಲ್ಲಿ ಸೂಕ್ತ ಸ್ಥಾನ ಪಡೆದುಕೊಳ್ಳಬೇಕಾಗುತ್ತದೆ. ಆದುದರಿಂದ ಎರಡರಿಂದ ಮೂರು ವರ್ಷಗಳಿಗೊಮ್ಮೆ ಪ್ರಸಕ್ತ ವ್ಯಾಸಂಗಕ್ರಮದಲ್ಲಿ ಹೊಸ ಬೆಳವಣಿಗೆಯ ಕ್ಷೇತ್ರಗಳಿಗೆ ಆದ್ಯತಾ ವ್ಯಾಸಂಗಕ್ರಮವಾಗಿ ಅವಕಾಶ ಕಲ್ಪಿಸಿಕೊಡಬೇಕಾಗುತ್ತದೆ.

ದೇಶದ ಗಾತ್ರ ಮತ್ತು ಜಾಗತಿಕ ಅನುಭವಗಳನ್ನು ಗಮನದಲ್ಲಿಟ್ಟುಕೊಂಡು ವ್ಯಾಸಂಗಕ್ರಮದ ರಚನೆ ಮತ್ತು ಅನುಷ್ಠಾನಗಳನ್ನು ವಿಕೇಂದ್ರೀಕರಿಸಬೇಕೆಂದು ಅಭಿಪ್ರಾಯಪಡಲಾಗಿದೆ. ಕೇಂದ್ರವು ವ್ಯಾಸಂಗಕ್ರಮದ ಸ್ಥೂಲ ಚೌಕಟ್ಟನ್ನು ರೂಪಿಸಿದಮೇಲೆ ಮತ್ತು ರಾಜ್ಯಗಳು ಅದನ್ನು ಅಭ್ಯಸಿಸಿ ತಮ್ಮ ಪರಿಸ್ಥಿತಿಗನುಗುಣವಾಗಿ ವಿಶ್ಲೇಷಿಸಬಹುದಾಗಿದೆ. ವ್ಯಾಸಂಗಕ್ರಮದ ನೀತಿಯನ್ನು ರೂಪಿಸುವಲ್ಲಿ ಸ್ವಹಿತಾಸಕ್ತಿಯಲ್ಲಿರುವವರೆಲ್ಲರ ಅಭಿಪ್ರಾಯಗಳು ಮತ್ತು ಸಹಭಾಗಿತ್ವ ಅತ್ಯಂತ ಪ್ರಮುಖವಾದುದಾಗಿವೆ.

**ಅಧ್ಯಾಯ ೨ :** ಈ ಅಧ್ಯಾಯವು ಹತ್ತು ವರ್ಷಗಳ ಸಾಮಾನ್ಯ ಶಿಕ್ಷಣವನ್ನು ಪೂರ್ಣಗೊಳಿಸುವ ಪ್ರಾಥಮಿಕ ಮತ್ತು ಪ್ರೌಢಹಂತಗಳ ವ್ಯಾಸಂಗಕ್ರಮವನ್ನು ವ್ಯವಸ್ಥೆಗೊಳಿಸುವುದಕ್ಕೆ ಮೀಸಲಾಗಿದೆ. ಸಂದರ್ಭ ಮತ್ತು ಸನ್ನಿವೇಶಗಳಿಗೆ ತಕ್ಕಂತೆ ಉದ್ಭವವಾಗುವ ಶಿಕ್ಷಣದ ಬಗೆಗಿನ ಸಾಮಾಜಿಕ ಬೇಡಿಕೆಗಳನ್ನು ಪೂರೈಸುವುದಕ್ಕೋಸ್ಕರ, ರಾಷ್ಟ್ರೀಯ ಶಿಕ್ಷಣನೀತಿ ೧೯೮೬ ಮತ್ತು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದ ರಾಷ್ಟ್ರೀಯ ವ್ಯಾಸಂಗಕ್ರಮ-ಒಂದು ಚೌಕಟ್ಟು-೧೯೮೮- ಇವುಗಳ ಸ್ಥೂಲ ಚೌಕಟ್ಟಿನ ಒಳಗೆ ಕೆಲವು ಆದ್ಯತಾ ಕ್ಷೇತ್ರಗಳನ್ನು ಗುರುತಿಸಲಾಗಿದೆ. ಅದರಂತೆ ರಾಷ್ಟ್ರಾದ್ಯಂತ ಶಾಲಾಶಿಕ್ಷಣದ ರಾಚನಿಕ ವ್ಯವಸ್ಥೆಯಲ್ಲಿ ಏಕರೂಪ (೧೦+೨), ತ್ರಿಭಾಷಾ ಸೂತ್ರದ ಮುಂದುವರಿಕೆ ಮತ್ತು ಮಾತೃಭಾಷಾ ಮಾಧ್ಯಮದಲ್ಲಿ ಶಿಕ್ಷಣ ಇಂದಿನ ಅಗತ್ಯಗಳೆಂದು ಮನಗಾಣಲಾಗಿದೆ.

**ಒತ್ತುಕೊಡಬೇಕಾಗಿರುವ ಅಂಶಗಳು:**

- ಭಾವಪೂರ್ಣ ತಿಳುವಳಿಕೆ ಮತ್ತು ಮೂಲಭೂತ ಜೀವನಕೌಶಲಗಳನ್ನು ಗಳಿಸಿಕೊಳ್ಳಲು ಸಹಾಯ ವಾಗುವಂತೆ ಪ್ರೌಢಶಾಲೆಯ ಕೊನೆಯ ಹಂತದವರೆಗೆ ಎಲ್ಲ ವಿದ್ಯಾರ್ಥಿಗಳಿಗೂ ವಿಶಾಲ ತಳಹದಿಯುಳ್ಳ ಸಾಮಾನ್ಯ ಶಿಕ್ಷಣವನ್ನು ಒದಗಿಸಬೇಕು.
- ಪ್ರಾಥಮಿಕ ಮತ್ತು ಪ್ರೌಢಶಾಲಾ ಹಂತದವರೆಗೆ ಸಾಮಾನ್ಯ ಅಧ್ಯಯನದ ರೂಪರೇಷೆಯನ್ನು ತಯಾರಿಸುವುದು. ಅದರಲ್ಲಿ ಕಲಿಯುವುದನ್ನು ಹೇಗೆ ಕಲಿಯಬೇಕು ಎಂಬುದಕ್ಕೆ ಒತ್ತು ಕೊಡಬೇಕು. ಅಲ್ಲದೆ ವಿಶೇಷ ಅಗತ್ಯಗಳಿಗೆ ಕಲಿಯುವವರೂ ಸೇರಿದಂತೆ, ಬೇರೆ ಎಲ್ಲ ರೀತಿಯ ಕಲಿಯುವವರ ಅಗತ್ಯಗಳಿಗೆ ತಕ್ಕ ಹಾಗೆ ವಿಷಯ ವಿಧಾನಗಳನ್ನು ಅಳವಡಿಸಿಕೊಳ್ಳುವ ಸೌಲಭ್ಯವಿರಬೇಕು.
- ಶಾಲಾಶಿಕ್ಷಣದ ಎಲ್ಲ ಹಂತಗಳಲ್ಲಿಯೂ ಮೂಲಭೂತ ಕರ್ತವ್ಯಗಳನ್ನು, ವ್ಯಾಸಂಗಕ್ರಮದ ಮೂಲ ವಿಷಯಗಳನ್ನು ಸೇರ್ಪಡೆಮಾಡಬೇಕು.

ಕಲಿಕೆಯ ಕನಿಷ್ಠ ಮಟ್ಟಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರುವುದರ ಅಗತ್ಯವಿದೆ. ಇದರಿಂದಾಗಿ ಕಲಿಯುವವರ ಅಗತ್ಯ ಮತ್ತು ಪರಿಸರ ಸನ್ನಿವೇಶಕ್ಕೆ ಅನುಗುಣವಾಗಿ ಕಲಿಕೆ ಅರ್ಥಪೂರ್ಣವಾಗುತ್ತದೆ ಮತ್ತು ಬೋಧಕರು, ಶಾಲೆ ಹಾಗೂ ಸ್ಥಳೀಯ ಅಧಿಕಾರವರ್ಗದವರು ಹೊಸ ಪ್ರಯತ್ನ ಮತ್ತು ಪ್ರಯೋಗಗಳನ್ನು ಕೈಗೊಳ್ಳುವುದಕ್ಕೆ ಅವಕಾಶ ಮಾಡಿಕೊಡುತ್ತದೆ. ಶಾಲಾವ್ಯಾಸಂಗಕ್ರಮದಲ್ಲಿ ಮೌಲ್ಯ ಶಿಕ್ಷಣಕ್ಕೆ ಪ್ರಧಾನ ಸ್ಥಾನ ಕಲ್ಪಿಸಲಾಗಿದೆ. ಇದು ವ್ಯಕ್ತಿಗತ, ಸಾಮಜಿಕ,ರಾಷ್ಟ್ರೀಯ ಮತ್ತು ಆಧ್ಯಾತ್ಮಿಕ ಮೌಲ್ಯಗಳಾದ ಸ್ವಚ್ಛತೆ ಮತ್ತು

ಕಾಲನಿಷ್ಠೆ, ಸಹನೆ ಮತ್ತು ನ್ಯಾಯಯುಕ್ತತೆ, ರಾಷ್ಟ್ರೀಯ ಭಾವನೆ, ಕಾನೂನು ಮತ್ತು ನಿಯಮಗಳ ಬಗ್ಗೆ ಗೌರವ ಮತ್ತು ಸತ್ಯಸಂಧತೆಗಳನ್ನು ಮೈಗೂಡಿಸಿಕೊಳ್ಳಲು ಹಾಗೂ ರೂಢಿಸಿಕೊಳ್ಳಲು ಸಹಾಯ ಮಾಡುತ್ತದೆ. ದೇಶದ ಎಲ್ಲ ಪ್ರಮುಖ ಧರ್ಮಗಳ ಬಗ್ಗೆ ಶಾಲಾ ಮಕ್ಕಳಲ್ಲಿ ತಿಳುವಳಿಕೆ ಮೂಡಿಸಬೇಕಾದ ಅಗತ್ಯವಿದೆ. ಹೊಸ ಆದ್ಯತಾ ಕ್ಷೇತ್ರಗಳು ಹೀಗಿವೆ:

- ಬಡತನ, ಅಜ್ಞಾನ,ಅನಾರೋಗ್ಯ, ಭ್ರಷ್ಟಾಚಾರ ಮತ್ತು ಹಿಂಸೆ ಮುಂತಾದ ಪಿಡುಗುಗಳನ್ನು ನಿವಾರಿಸುವುದು ಮತ್ತು ಸಮಾನತೆ, ಆರೋಗ್ಯ, ಶಾಂತಿ ಮತ್ತು ಸಮೃದ್ಧಿಯನ್ನು ಸಾಧಿಸುವುದು.
- ಭಾರತೀಯ ಪರಂಪರೆ ಮತ್ತು ಧರ್ಮದಲ್ಲಿ ಬೇರೂರಿರುವ ಚಿಂತನೆಗಳು ಅನುಭವಗಳು ಮತ್ತು ಸಂಶೋಧನೆಗಳನ್ನು ಜಾಗತಿಕ ಚಿಂತನೆಯ ಜೊತೆ ಸಮೀಕರಿಸುವುದು.
- ಮಗುವಿನ ಹಕ್ಕುಗಳನ್ನು ಒಳಗೊಂಡಂತೆ ಮಾನವ ಹಕ್ಕುಗಳು, ಅದರಲ್ಲೂ ಹೆಣ್ಣುಮಗುವಿನ ಹಕ್ಕುಗಳನ್ನು ಜಾರಿಗೆ ತರುವುದು.
- ಕಲಿಯುವವರಲ್ಲಿ, ಅವರು ಕಲಿಯುವ ಎಲ್ಲ ಕ್ಷೇತ್ರಗಳಲ್ಲಿ ದೊರಕಿದ ಮೊದಲ ಅವಕಾಶದಲ್ಲೇ ಬಹುಮುಖ ಪ್ರತಿಭೆಯನ್ನು ಮತ್ತು ಸೃಜನ ಶೀಲತೆಯನ್ನು ಪೋಷಿಸಿ ಬೆಳೆಸುವುದು.
- ಮಾಹಿತಿ ಆಧಾರಿತ ಮತ್ತು ಶಿಕ್ಷಕ ಕೇಂದ್ರಿತ ಶಿಕ್ಷಣ ವ್ಯವಸ್ಥೆಯ ಮೇಲಿನ ಒತ್ತನ್ನು ಪ್ರಕ್ರಿಯೆ ಕೇಂದ್ರಿತ ಮತ್ತು ವಿದ್ಯಾರ್ಥಿ ಸೌಹಾರ್ದ ಶಿಕ್ಷಣ ವ್ಯವಸ್ಥೆಗೆ ವರ್ಗಾಯಿಸುವುದು.
- ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದ ಬಳಕೆ.

ಶಿಕ್ಷಣದ ಸಾಮಾನ್ಯ ಉದ್ದೇಶಗಳು ಶಿಕ್ಷಣಾರ್ಥಿಗಳ ಸರ್ವತೋಮುಖ ವ್ಯಕ್ತಿತ್ವ ಬೆಳವಣಿಗೆ ಮತ್ತು ಅಭಿವೃದ್ಧಿಯ ರಾಷ್ಟ್ರೀಯ ಗುರಿಗಳನ್ನು ಅರ್ಥಮಾಡಿಕೊಳ್ಳುವುದಕ್ಕೆ ಹೆಚ್ಚು ಒತ್ತನ್ನು ನೀಡುತ್ತವೆ. ನಮ್ಮ ದೃಷ್ಟಿ ಕೇಂದ್ರೀಕೃತವಾಗಬೇಕಾದದ್ದು ಕೆಳಗಿನ ಅಂಶಗಳ ಮೇಲೆ:

- ಬದಲಾವಣೆಗೆ ಅನುವುಮಾಡಿಕೊಡುತ್ತಿರುವ ತಂತ್ರಜ್ಞಾನ ಮತ್ತು ದೇಶದ ಮುಂದುವರಿದ ಸಂಪ್ರದಾಯ ಮತ್ತು ಪರಂಪರೆಯ ಮಧ್ಯೆ ಸಮತೋಲನ ಸಂಶ್ಲೇಷಣೆಯೊಂದರ ಅಗತ್ಯವನ್ನು ಮೆಚ್ಚಿಕೊಳ್ಳುವುದು.
- ರಾಷ್ಟ್ರದ ಸಂದರ್ಭಕ್ಕನುಗುಣವಾಗಿ ಜಾಗತೀಕರಣ ಮತ್ತು ಉದಾರೀಕರಣ ಪ್ರಕ್ರಿಯೆಗಳ ಇತ್ಯಾತ್ಮಕ ಮತ್ತು ನೇತ್ಯಾತ್ಮಕ ಪರಿಣಾಮಗಳನ್ನು ಅರ್ಥಮಾಡಿಕೊಳ್ಳುವುದು.
- ವಸುಧೈವ ಕುಟುಂಬಕಂ ಎಂಬ ತತ್ವಾಧಾರಿತ ದೇಶಪ್ರೇಮ ಮತ್ತು ರಾಷ್ಟ್ರೀಯತೆಯ ಆಳವಾದ ಅರಿವು.
- ವ್ಯಕ್ತಿಯ ಸುತ್ತ ಇರುವ ವ್ಯಕ್ತಿಗತ, ಸಾಮಾಜಿಕ, ರಾಷ್ಟ್ರೀಯ, ನೈತಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳ ಗುಣಗುಚ್ಛಗಳು ಅವನನ್ನು ಮಾನವೀಯ ವ್ಯಕ್ತಿಯನ್ನಾಗಿಸಿ ಸಾಮಾಜಿಕವಾಗಿ ಪರಿಣಾಮಿಯಾಗಿ ಮಾಡುವುದರ ಮೂಲಕ ಅವನ ಜೀವನಕ್ಕೊಂದು ಅರ್ಥ ಮತ್ತು ನಿರ್ದೇಶವನ್ನು ನೀಡುವಂತೆ ಮಾಡುವುದು.

- ಸ್ವಕಲಿಕೆ, ಸ್ವಯಂ ನಿರ್ದೇಶಿತ ಕಲಿಕೆ ಮತ್ತು ಜೀವನಪರ್ಯಂತ ಕಲಿಕೆ ಇವುಗಳಿಗೆ ಅವಶ್ಯವಿರುವ ಗುಣ ಮತ್ತು ಲಕ್ಷಣಗಳು ಕಲಿಕಾ ಸಮಾಜವೊಂದರ ಸೃಷ್ಟಿಗೆ ಕಾರಣೀಭೂತವಾಗುತ್ತವೆ.

- ವಿದ್ಯಾರ್ಥಿ ಕೇಂದ್ರಿತ ಮಾರ್ಗಕ್ಕೆ (learner centred approach) ಕೊಡುವ ಒತ್ತು, ಕಲಿಯುವವನ ವಯೋಮಾನಕ್ಕೆ ತಕ್ಕಂತೆ ಆತನ ದೈಹಿಕ, ಬೌದ್ಧಿಕ, ಸಾಮಾಜಿಕ ಮತ್ತು ಭಾವನಾತ್ಮಕ ಬೆಳವಣಿಗೆಯ ಜೊತೆ ಸರಿಹೊಂದಾಣಿಕೆಯನ್ನು ಪಡೆದಿರುತ್ತದೆ. ಈ ಸಂದರ್ಭದಲಿ ಪರಂಪರಾಗತ ಪಿಯಾಜೆ ಮಾದರಿಯಾದ ಮಗುವಿನ ಬೆಳವಣಿಗೆಯಿಂದ ಸಾಮೀಪ್ಯ ವರ್ಧನವಲಯಕ್ಕೆ (zone of proximal development) ಬದಲಾಗುವುದು ಹೆಚ್ಚು ಮಹತ್ವವನ್ನು ಪಡೆಯುತ್ತದೆ.

**ಅಧ್ಯಯನ ರೂಪರೇಷೆ (Scheme of studies):**

ಶಿಕ್ಷಣದ ಸಾಮಾನ್ಯ ಉದ್ದೇಶಗಳನ್ನು ಮತ್ತು ಶಾಲಾ ಶಿಕ್ಷಣದ ವಿವಿಧ ಹಂತಗಳಲ್ಲಿರುವ ವ್ಯಾಸಂಗಕ್ರಮದ ಹೊರೆಯ ಸಮಸ್ಯೆಯನ್ನು ಗಮನದಲ್ಲಿಟ್ಟುಕೊಂಡು ಅಧ್ಯಯನದ ರೂಪರೇಷೆಗಳನ್ನು ಸೂಚಿಸಲಾಗಿದೆ. ಅದರ ಶಿಫಾರಸುಗಳು ಹೀಗಿವೆ : (ಎ) ೪ ರಿಂದ ೬ ವರ್ಷದೊಳಗಿನ ಮಕ್ಕಳಿಗೆ ೨ ವರ್ಷಗಳ ಅವಧಿಯವರೆಗೆ ಶಿಶುಪಾಲನೆ ಮತ್ತು ಶಿಕ್ಷಣ ದೊರೆಯುವಂತೆ ಮಾಡುವುದು. ಈ ಹಂತದಲ್ಲಿ ಸಾಂಪ್ರದಾಯಿಕ ಬೋಧನೆ ಮತ್ತು ಮೌಲ್ಯ ಮಾಪನಕ್ಕೆ ಅವಕಾಶವಿರುವುದಿಲ್ಲ. ಪ್ರತಿಯಾಗಿ ಶಾಲೆಗೆ ಸೇರಲು ಮಗುವನ್ನು ಸಿದ್ಧಗೊಳಿಸುವುದು ಮತ್ತು ಅದಕ್ಕೆ ಅನುಭವ ದೊರಕಿಸುವುದು; (ಬಿ) ೧ ಮತ್ತು ೨ನೇ ತರಗತಿಗಳಲ್ಲಿ ಒಂದು ಭಾಷೆಯ ಅಧ್ಯಯನ (ಮಾತೃ ಭಾಷೆ/ಪ್ರಾದೇಶಿಕ ಭಾಷೆ), ಗಣಿತ ಅಧ್ಯಯನ, ಜೊತೆಗೆ ಆರೋಗ್ಯಕರ ಅಭ್ಯಾಸ ಮತ್ತು ಲವಲವಿಕೆಯ ಹವ್ಯಾಸ ಪಡೆದುಕೊಳ್ಳುವುದು; (ಸಿ) ಉನ್ನತ ಪ್ರೈಮರಿ ಮತ್ತು ಪ್ರೌಢ ಹಂತಗಳಲ್ಲಿ ಕಲಿಯಬೇಕಾದ ವಿಷಯಗಳು ಹೀಗಿವೆ – ಮೂರುಭಾಷೆಗಳ ಅಧ್ಯಯನ (ಮಾತೃ ಭಾಷೆ/ಪ್ರಾದೇಶಿಕಭಾಷೆ/ ಆಧುನಿಕ ಭಾರತೀಯ ಭಾಷೆ ಮತ್ತು ಇಂಗ್ಲಿಷ್), ಗಣಿತ, ವಿಜ್ಞಾನ ಮತ್ತು ತಂತ್ರಜ್ಞಾನ, ಸಮಾಜ ವಿಜ್ಞಾನ, ವೃತ್ತಿ ಶಿಕ್ಷಣ, ಕಲಾಶಿಕ್ಷಣ, (ಲಲಿತಕಲೆ; ದೃಶ್ಯ ಮತ್ತು ಅಭಿನಯ) ಮತ್ತು ಆರೋಗ್ಯ ಮತ್ತು ದೈಹಿಕ ಶಿಕ್ಷಣ (ಆಟೋಟ ಮತ್ತು ಯೋಗ ಎನ್.ಸಿ.ಸಿ, ಸ್ಕೌಟ್ಸ್, ಗೈಡ್ಸ್ ಮತ್ತು ರೆಡ್‌ಕ್ರಾಸ್), ಇವುಗಳೊಡನೆ ಕಂಪ್ಯೂಟರ್ ಶಿಕ್ಷಣವನ್ನು ಅವಕಾಶವಿರುವೆಡೆ ಒದಗಿಸಲಾಗುವುದು.

**ಶಾಲಾ ವ್ಯಾಸಂಗಕ್ರಮವು ಒಳಗೊಳ್ಳಬಹುದಾದ ವಿಶೇಷ ಲಕ್ಷಣಗಳು –**

* ಎಲ್ಲಾ ವಿದ್ಯಾರ್ಥಿಗಳಿಗೂ ಆರೋಗ್ಯಕರ, ಆನಂದದಾಯಕ, ಒತ್ತಡರಹಿತ ಆರಂಭಿಕ ಶಿಶುಪಾಲನೆ ಮತ್ತು ಶಿಕ್ಷಣ ದೊರೆಯುವಂತಾಗಬೇಕು. ಔಪಚಾರಿಕ ಬೋಧನೆ ಮತ್ತು ಔಪಚಾರಿಕ ಪರೀಕ್ಷೆ ಇರಬಾರದು.

- ಪ್ರಾಥಮಿಕ ಶಿಕ್ಷಣದ ಮೊದಲ ಎರಡು ವರ್ಷಗಳಲ್ಲಿ ಪರಿಸರವನ್ನು ಭಾಷೆಗಳು, ಗಣಿತಶಾಸ್ತ್ರ ಮತ್ತು ಇತರ ಚಟುವಟಿಕೆಗಳಲ್ಲಿ ಸಂಯೋಜಿಸುವುದು.

- ಪ್ರಾಥಮಿಕ ಹಂತದಲ್ಲಿ "ಆರೋಗ್ಯದಾಯಕ ಮತ್ತು ಫಲದಾಯಕ ಜೀವನ ಕಲೆ"ಯೊಡನೆ ಕಲಾಶಿಕ್ಷಣ, ಆರೋಗ್ಯ ಮತ್ತು ದೈಹಿಕ ಶಿಕ್ಷಣ ಹಾಗೂ ವೃತ್ತಿ ಶಿಕ್ಷಣವನ್ನು ಸಂಯೋಜಿಸುವುದು.

- ಗಣಿತವನ್ನು ಪ್ರೌಢ ಶಿಕ್ಷಣ ಹಂತದವರೆಗೆ ನಿಜ ಜೀವನಕ್ಕೆ ಸಮೀಪವಾಗುವಂತೆ ಮಾಡುವುದು ಮತ್ತು ಈಗಾಗಲೇ ಇರುವ ವಿಜ್ಞಾನ ಪ್ರಯೋಗಶಾಲೆಯಲ್ಲಿ ಪ್ರಾಯೋಗಿಕ ಗಣಿತಶಾಸ್ತ್ರಕ್ಕೆ ಒಂದು ಪ್ರತ್ಯೇಕ ಸ್ಥಳಾವಕಾಶ ಕಲ್ಪಿಸಿಕೊಡುವುದು.

- ಉನ್ನತ ಪ್ರಾಥಮಿಕ ಮತ್ತು ಪ್ರೌಢ ಶಾಲಾ ಮಟ್ಟದಲ್ಲಿ ಆರೋಗ್ಯ ಮತ್ತು ದೈಹಿಕ ಶಿಕ್ಷಣಕ್ಕೆ ಪೂರಕವಾಗಿ ಆಟೋಟಗಳು, ಎನ್ ಸಿ ಸಿ, ಸ್ಕೌಟ್ಸ್ ಮತ್ತು ಗೈಡ್ಸ್ ಮತ್ತು ರೆಡ್‌ಕ್ರಾಸ್ ಚಟುವಟಿಕೆಗಳನ್ನು ಸೇರಿಸುವುದು.

- ಪ್ರೌಢಶಾಲಾ ಹಂತದವರೆಗೆ ವಿಜ್ಞಾನ ಮತ್ತು ತಂತ್ರಜ್ಞಾನಗಳನ್ನು ಸಂಯೋಜಿಸುವುದು.

- ಉನ್ನತ ಪ್ರಾಥಮಿಕ ಮತ್ತು ಪ್ರೌಢಶಾಲಾ ಹಂತದಲ್ಲಿ ಸಮಾಜ ವಿಜ್ಞಾನಗಳ ಬೋಧನೆಯಲ್ಲಿ ಸಂಯೋಜಿತ ವಿಷಯ ವಿಧಾನ ಅನುಸರಿಸುವುದು.

- ಪ್ರಾಥಮಿಕ ಮತ್ತು ಉನ್ನತ ಪ್ರಾಥಮಿಕ ಹಂತಗಳಲ್ಲಿ ಹಿಂದಿ ಮತ್ತು ಪ್ರಾದೇಶಿಕ ಭಾಷೆಗಳನ್ನು ಮಾತೃಭಾಷೆಯಾಗಿ ಕಲಿಸುವಾಗ ಅವುಗಳ ಸಂಯೋಜಿತ ಕೋರ್ಸಿನ ಭಾಗವಾಗಿ ಸೂಕ್ತ ಸಂದರ್ಭದಲ್ಲಿ ಸಂಸ್ಕೃತ ಭಾಷೆಯನ್ನು ಬೋಧಿಸುವುದು. ಪ್ರೌಢ ಶಿಕ್ಷಣದಲ್ಲಿ ಸಂಸ್ಕೃತವನ್ನು ಹೆಚ್ಚುವರಿ ಐಚ್ಛಿಕ ಭಾಷೆಯಾಗಿ ಬೋಧಿಸುವುದು.

- ರಾಷ್ಟ್ರದ ಅಧಿಕೃತ ಭಾಷೆಯಾಗಿ ಹಿಂದಿ ಭಾಷಾ ಬೋಧನೆಗೆ ಸೂಕ್ತ ಪ್ರಾಧಾನ್ಯ ನೀಡುವುದು.

- ಶಾಲೆಯಲ್ಲಿಯ ಬೇಡಿಕೆ ಮತ್ತು ಆದರ ಸೌಕರ್ಯಕ್ಕನುಗುಣವಾಗಿ ಪ್ರೌಢಶಾಲಾ ಶಿಕ್ಷಣದ ಹಂತದಲ್ಲಿ ಆಯಾ ಶಾಲೆಗಳಲ್ಲಿ ಬರಬಹುದಾದ ಬೇಡಿಕೆ ಮತ್ತು ಇರಬಹುದಾದ ಸೌಲಭ್ಯಗಳನ್ನು ಗಮನದಲ್ಲಿಟ್ಟುಕೊಂಡು ವಿದೇಶೀ ಭಾಷೆಗಳನ್ನು ಹೆಚ್ಚುವರಿ ಐಚ್ಛಿಕ ಭಾಷೆಯಾಗಿ ಕಲಿಯಲು ಅನುವುಮಾಡಿಕೊಡುವುದು.

- ಪಠ್ಯ ಮತ್ತು ಸಹ ಪಠ್ಯ ವಿಷಯಗಳಿಗೆ ಯಥೋಚಿತವಾದ ಕಾಲಾವಕಾಶ ಕೊಟ್ಟು ಅದಕ್ಕೆ ಬದ್ಧರಾಗಿರುವುದು ಅತಿ ಮುಖ್ಯವಾದುದು.

- ಸೂಕ್ತ ಮತ್ತು ಪರಿಣಾಮಕಾರಿಯಾದ ಪರ್ಯಾಯ ಶಿಕ್ಷಣ ವ್ಯವಸ್ಥೆ ಮತ್ತು ಮುಕ್ತ ಶಿಕ್ಷಣ ವಿಧಾನದ ಬೆಳವಣಿಗೆಗೆ ಅನುವು ಮಾಡುವುದು.

ಅಧ್ಯಾಯ ೩: ಇದು ಉನ್ನತ ಪ್ರೌಢಶಾಲಾ ಮಟ್ಟದಲ್ಲಿ ವ್ಯಾಸಂಗಕ್ರಮದ ನಿರ್ವಹಣೆಯನ್ನು ಕುರಿತು ಪ್ರಸ್ತಾಪಿಸುತ್ತದೆ. ಇದನ್ನು ರಾಷ್ಟ್ರೀಯ ವ್ಯಾಸಂಗಕ್ರಮದ ಚೌಕಟ್ಟಿನಲ್ಲಿ ಪ್ರಥಮಬಾರಿಗೆ ಸೇರಿಸಲಾಗಿದೆ.

ಉನ್ನತ ಪ್ರೌಢಶಾಲಾ ಹಂತದ ಶಿಕ್ಷಣವು ಹಲವು ವಿಧಗಳಲ್ಲಿ ನಮ್ಮ ಮುಂದೆ ಸವಾಲುಗಳನ್ನೊಡ್ಡುತ್ತದೆ. ಹದಿಹರೆಯದಿಂದ ಯೌವನಕ್ಕೆ ಕಾಲಿಡುತ್ತಿರುವ ಈ ಮಹತ್ವದ ವರ್ಷಗಳಲ್ಲಿ ಕಲಿಯುವವರು ತಮ್ಮ ಅಗತ್ಯ, ಆಸಕ್ತಿ, ಸಾಮರ್ಥ್ಯ ಮತ್ತು ಅಭಿರುಚಿಗಳಿಗೆ ಅನುಗುಣವಾಗಿ ತಮಗೆ ಬೇಕಾದ ಕೋರ್ಸುಗಳನ್ನು ಆಯ್ಕೆ ಮಾಡಿಕೊಳ್ಳಬಹುದು. ಅವರು ತಮಗೆ ಬೇಕಾದ ಶೈಕ್ಷಣಿಕ ಐಚ್ಛಿಕ ವಿಷಯಗಳನ್ನು ಆರಿಸಿಕೊಳ್ಳಬಹುದು. ಅಥವಾ ಉದ್ಯೋಗ ಪರಿಚಯ ನೀಡುವ ವೃತ್ತಿ ಶಿಕ್ಷಣ ಆರಿಸಿಕೊಳ್ಳಬಹುದು. ಈ ಘಟ್ಟದ ನಂತರ ಬಹುತೇಕ ವಿದ್ಯಾರ್ಥಿಗಳು ಔದ್ಯೋಗಿಕ ಪ್ರಪಂಚಕ್ಕೆ ಕಾಲಿಡಬಹುದು ಮತ್ತು ಕೆಲವು ವಿದ್ಯಾರ್ಥಿಗಳು ತಮ್ಮ ಆಯ್ಕೆಯ ಉನ್ನತ ಶಿಕ್ಷಣವನ್ನು ಮುಂದುವರಿಸಬಹುದು. ಆದುದರಿಂದ ಶಿಕ್ಷಣ ಈ ಘಟ್ಟದಲ್ಲಿ ತನ್ನ ಗಮನವನ್ನು ಜ್ಞಾನ, ಕೌಶಲಗಳು, ಧೋರಣೆಗಳು ಮತ್ತು ಉದ್ಯಮಶೀಲತೆಯ ಕಡೆಗೆ ಹರಿಸಬೇಕಾಗುತ್ತದೆ. ಜೀವನದಲ್ಲಿ ಆಗುವ ಬದಲಾವಣೆಗಳು ಮತ್ತು ಎದುರಾಗಬಹುದಾದ ಸವಾಲುಗಳನ್ನು ಸಮರ್ಥವಾಗಿ ಎದುರಿಸಲು ಯುವಕರನ್ನು ತಯಾರುಮಾಡುವ ಆವಶ್ಯಕತೆ ಇದೆ. ಅದಕ್ಕಾಗಿ ಸೂಕ್ತ ಒತ್ತುಕೊಟ್ಟು ಸಾಂಸ್ಕೃತಿಕ ಮತ್ತು ನೈತಿಕ ಮೌಲ್ಯಗಳನ್ನು ಎಚ್ಚರಿಕೆಯಿಂದ ಪೋಷಿಸಬೇಕಾಗುತ್ತದೆ.

ಸಮಾನತೆ ಮತ್ತು ಶ್ರೇಷ್ಠತೆಗೆ ಸೂಕ್ತ ಪ್ರಾಧಾನ್ಯ ನೀಡಬೇಕಾಗುತ್ತದೆ. ಅಸ್ತಿತ್ವದಲ್ಲಿರುವ ಅಸಮಾನತೆಗಳನ್ನು ತೊಡೆದುಹಾಕಲು ಗ್ರಾಮೀಣ, ಗುಡ್ಡಗಾಡು ಮತ್ತು ದೂರದ ಪ್ರದೇಶಗಳಲ್ಲಿರುವ ವಿದ್ಯಾ ಸಂಸ್ಥೆಗಳನ್ನು ವಿಶೇಷವಾಗಿ ಪೋಷಿಸಬೇಕು. ಅದೇ ಸಮಯದಲ್ಲಿ ಯಾವುದೇ ಅಂತಾರಾಷ್ಟ್ರೀಯ ದರ್ಜೆಗೆ ಹೋಲಿಸಬಹುದಾದ ರಾಷ್ಟ್ರೀಯ ಶೈಕ್ಷಣಿಕ ದರ್ಜೆ ನಮ್ಮದಾಗುವಂತೆ ದೃಢೀಕರಿಸಬೇಕು.

ಈ ಹಂತದಲ್ಲಿ ಶಿಕ್ಷಣ ಪಥವು , ಶೈಕ್ಷಣಿಕ ಮತ್ತು ವೃತ್ತಿಪರ ಎಂದು ಕವಲೊಡೆಯುತ್ತದೆ. ಈ ಹಂತದಲ್ಲಿ ಅಧ್ಯಯನದ ವಿಷಯಗಳ ಆಯ್ಕೆಯಲ್ಲಿ ಮುಕ್ತತೆ ಮತ್ತು ಕಲಿಕೆಯ ವೇಗ ಪರಂಪರಾಗತವಾಗಿ ಬಂದಿರುವ ಬಿಗಿತನವನ್ನು ಎಷ್ಟು ಸಾಧ್ಯವೋ ಅಷ್ಟು ಬದಲಿಸಲೇ ಬೇಕು. ಈ ಎರಡು ಧಾರೆಗಳಲ್ಲಿ ನ್ಯಾಯಯುತವಾಗಿ ಸಮ್ಮಿಶ್ರಣಗೊಂಡ ಮೂಲ ಅಧ್ಯಯನ ಮತ್ತು ಅಗತ್ಯಾಧಾರಿತ ಐಚ್ಛಿಕ ವಿಷಯಗಳ ಅಧ್ಯಯನ ಲಭ್ಯವಿರುವಂತೆ ಮಾಡಬೇಕು. ಶೈಕ್ಷಣಿಕ ಮತ್ತು ವೃತ್ತಿಪರ ಶಿಕ್ಷಣಗಳ ನಡುವೆ ಹಾಗೂ ಅನೇಕ ಸಾಂಪ್ರದಾಯಿಕ ವಿಷಯ ಸಮೂಹಗಳ ನಡುವೆ ಮಾನಸಿಕ ನಿಷೇಧಗಳನ್ನು ಉಂಟುಮಾಡಿರುವ ಅಡೆತಡೆಗಳನ್ನು ಸಂಪೂರ್ಣವಾಗಿ ನಿವಾರಿಸಬೇಕು. ಎರಡು ಶಿಕ್ಷಣ ವಿಧಾನಗಳಿಗೂ ಮುಕ್ತ ಶಾಲಾ ಪದ್ಧತಿಯನ್ನು ಉಪಯೋಗಿಸಿಕೊಳ್ಳಬಹುದು. ಔಪಚಾರಿಕ ಶಿಕ್ಷಣ ವ್ಯವಸ್ಥೆ ಮತ್ತು ಪರ್ಯಾಯ ಹಾಗೂ ಮುಕ್ತ ಶಿಕ್ಷಣ ವ್ಯವಸ್ಥೆಯ ನಡುವೆ ಪರಸ್ಪರ ಅವಲಂಬನಾ ಸಂಬಂಧವು ಏರ್ಪಟ್ಟರೆ ಅದು ವಿದ್ಯಾರ್ಥಿಗೆ ಲಾಭದಾಯಕ. ಈ ಘಟ್ಟದಲ್ಲಿ ಷಾಣ್ಮಾಸಿಕ ವ್ಯವಸ್ಥೆಯನ್ನು ಕೂಡ ಕ್ರಮೇಣವಾಗಿ ಪರಿಚಯಿಸಬಹುದು. ಅದು ಕಲಿಯುವುದರಲ್ಲಿ ಮತ್ತು ಮೌಲ್ಯಮಾಪನದಲ್ಲಿ ಹೆಚ್ಚಿನ ಸ್ವಾತಂತ್ರ್ಯಾವಕಾಶ ನೀಡುತ್ತದೆ.

ಈ ಹಂತದಲ್ಲಿ ವ್ಯಾಸಂಗಕ್ರಮವನ್ನು ಎರಡು ಧಾರೆಗಳಲ್ಲಿ ರೂಪಿಸಬೇಕಾಗುತ್ತದೆ. ಶೈಕ್ಷಣಿಕ ಧಾರೆ ಮತ್ತು ವೃತ್ತಿಪರ ಧಾರೆ. ಇವುಗಳ ನಡುವೆ ಸೂಕ್ತ ಸಂಪರ್ಕವಿರುವಂತೆ ನೋಡಿಕೊಳ್ಳಬೇಕು. ಶಿಕ್ಷಣ ಧಾರೆಯಲ್ಲಿ ವ್ಯಾಸಂಗಕ್ರಮ ಕೆಳಕಂಡಂತಿವೆ. ೧. ತಳಹದಿ ಕೋರ್ಸಿನಲ್ಲಿ ಭಾಷೆ ಮತ್ತು ಸಾಹಿತ್ಯ, ಕಸುಬುಗಾರಿಕೆ ಶಿಕ್ಷಣ ಮತ್ತು ಆರೋಗ್ಯ ಮತ್ತು ದೈಹಿಕ ಶಿಕ್ಷಣ, ಆಟೋಟಗಳು. ೨. ಐಚ್ಛಿಕ ಕೋರ್ಸಿನಲ್ಲಿ ಹಿಂದಿನಿಂದ ರೂಢಿಯಲ್ಲಿರುವ ಅಧ್ಯಯನ ವಿಷಯಗಳ ಜೊತೆಗೆ ಹೊಸ ಸಾಧ್ಯತೆಗಳಿರುವ ಅಧ್ಯಯನ ವಿಷಯಗಳಾದ ಗ್ರಾಹಕ ಶಿಕ್ಷಣ, ಕಾನೂನು ಶಿಕ್ಷಣ, ಜನಸಂಖ್ಯಾ ಶಿಕ್ಷಣ, ವಲಸೆ ಶಿಕ್ಷಣ, ಸಂದಿಗ್ಧ ಸ್ಥಿತಿಯ ನಿರ್ವಹಣೆ, ಕಂಪ್ಯೂಟರ್ ವಿಜ್ಞಾನ, ವಂಶ ವಿಜ್ಞಾನ, ಪರಿಸರ ವಿಜ್ಞಾನ ಮತ್ತು ಯೋಗ ಇವುಗಳಲ್ಲಿ ಯಾವುದಾದರೂ ಮೂರು ಅಧ್ಯಯನ ವಿಷಯಗಳ ಆಯ್ಕೆ. ಆಧುನಿಕ ಭಾರತದ ಯಾವುದಾದರೂ ಒಂದು ಭಾಷೆಯನ್ನು ದ್ವಿತೀಯ ಭಾಷೆಯನ್ನಾಗಿಯೂ,

ಸಂಸ್ಕೃತ, ಪ್ರಾಚೀನ ಭಾಷೆಗಳು, ಇಂಗ್ಲಿಷ್(ಶೈಕ್ಷಣಿಕ ಅಥವಾ ವಿಶೇಷ ಅಗತ್ಯಕ್ಕೆ) ಮತ್ತು ಇನ್ನಿತರ ವಿದೇಶೀ ಭಾಷೆಗಳನ್ನು ಐಚ್ಛಿಕ ಅಧ್ಯಯನದ ಆಯ್ಕೆಗಳಾಗಿ ಬಳಸಿಕೊಳ್ಳಬಹುದು. ತಳಹದಿ ಕೋರ್ಸು ಮತ್ತು ಐಚ್ಛಿಕ ಕೋರ್ಸಿನಲ್ಲಿ ಭಾಷೆಯ ಆಯ್ಕೆಯ ಸ್ವಾತಂತ್ರ್ಯವನ್ನು ವಿದ್ಯಾರ್ಥಿಯ ಆದ್ಯತೆಗೆ ಬಿಡಬಹುದು.

ಶಿಕ್ಷಣದ ಎಲ್ಲ ಹಂತಗಳಲ್ಲೂ ಔದ್ಯೋಗಿಕ ಶಿಕ್ಷಣಕ್ಕೆ ಹೆಚ್ಚು ಪ್ರಾಶಸ್ತ್ಯ ನೀಡಬೇಕು. ಉನ್ನತ ಪ್ರೌಢ ಶಿಕ್ಷಣದ ಹಂತದಲ್ಲಿ ವೃತ್ತಿಶಿಕ್ಷಣ ಮಾರ್ಗವು ಎರಡು ವರ್ಷಗಳ ಕೋರ್ಸಿನಂತೆ ಬಿಗಿಯಾಗಿರಬೇಕಾಗಿಲ್ಲ. ಆದರೆ ಅದಕ್ಕೆ ಅದರದ್ದೇ ಆದ ಸ್ವಾತಂತ್ರ್ಯವಿದ್ದು ಆಗಿಂದಾಗ್ಗೆ ಅದನ್ನು ಪುನರ್ವಿಮರ್ಶಿಸಬೇಕಾಗುತ್ತದೆ. ಶಾಲೆಯನ್ನು ಬಿಟ್ಟಿರುವ ಹೆಣ್ಣುಮಕ್ಕಳಿಗೆ ಅವರ ಆವಶ್ಯಕತೆಗಳಿಗನುಗುಣವಾಗಿ ಉದ್ಯಮಶೀಲತೆಗೆ ಒತ್ತುಕೊಡುವ ಸಾಂಪ್ರದಾಯಿಕವಲ್ಲದ ಕಾರ್ಯಕ್ರಮ ಮತ್ತು ತಂತ್ರಜ್ಞಾನ ವಿಷಯಗಳಲ್ಲಿ ಶಿಕ್ಷಣ ಕೊಡಬೇಕು. ಇದಕ್ಕಾಗಿ ಬಹು ಪ್ರವೇಶವುಳ್ಳ ಹಾಗೂ ಬಹು ಫಲಿತಾಂಶ ದೊರಕಿಸಿಕೊಡುವ ಕಲಿಯುವವರ ಅನುಕೂಲಕ್ಕೆ ತಕ್ಕ ಅವಧಿಯಲ್ಲಿ ನಡೆಸಬಹುದಾದ ಕೋರ್ಸುಗಳನ್ನು ನಡೆಸಬೇಕಾಗುತ್ತದೆ. ಈ ಕಾರ್ಯಕ್ರಮಗಳು ಅವಕಾಶವಂಚಿತರಾದ ಅಂಗವಿಕಲರ, ಪರಿಶಿಷ್ಟಜನಾಂಗ ಮತ್ತು ಪರಿಶಿಷ್ಟಜಾತಿಯ ಹಾಗೂ ಸ್ತ್ರೀಯರ ಆವಶ್ಯಕತೆಗಳನ್ನು ಪೂರೈಸಬೇಕು.

ವೃತ್ತಿಶಿಕ್ಷಣದಲ್ಲಿ ಶ್ರೇಷ್ಠತೆ, ಸಾಮರ್ಥ್ಯಾಧಾರಿತ ವ್ಯಾಸಂಗಕ್ರಮ ಮತ್ತು ಶಾಲೆಗಳು ಹಾಗೂ ಕೈಗಾರಿಕೆಗಳ ನಡುವೆ ಸಂಪರ್ಕ ಇವುಗಳು ವೃತ್ತಿ ಶಿಕ್ಷಣದ ಪ್ರಮುಖ ಲಕ್ಷಣಗಳು. ಈ ಲಕ್ಷಣಗಳು ಸಂಘಟಿತ ವಲಯ, ಸೇವಾವಲಯ, ಗ್ರಾಮೀಣ ಮತ್ತು ಕೃಷಿ ಆಧಾರಿತ ಕೈಗಾರಿಕೆಗಳು, ಕೃಷಿ, ವ್ಯವಹಾರ ಮತ್ತು ವ್ಯಾಪಾರ ಇವುಗಳ ಆವಶ್ಯಕತೆಗೆ ತಕ್ಕಹಾಗೆ ಬಳಕೆಯಾಗಬೇಕು.

ವೃತ್ತಿಶಿಕ್ಷಣವೂ ಕೂಡ ತಳಹದಿ ಕೋರ್ಸಿನ ಸಮರ್ಥ ಅಂಶಗಳನ್ನು ಒಳಗೊಂಡಿದ್ದು, ಅವುಗಳಲ್ಲಿ ಭಾಷೆ ಮತ್ತು ಸಾಹಿತ್ಯ, ಸಾಮಾನ್ಯ ಅಧ್ಯಯನ ಮತ್ತು ಆರೋಗ್ಯ ಮತ್ತು ದೈಹಿಕ ಶಿಕ್ಷಣಗಳಿರುತ್ತವೆ. ಈ ಧಾರೆಯ ಕೆಳಗೆ ಬರುವ ಐಚ್ಛಿಕ ಕೋರ್ಸಿನಲ್ಲಿ ಕೃಷಿ, ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನ, ವ್ಯವಹಾರ ಮತ್ತು ವಾಣಿಜ್ಯ, ಕಂಪ್ಯೂಟರ್ ಬಳಕೆ, ಗೃಹವಿಜ್ಞಾನ, ಆರೋಗ್ಯ ಮತ್ತು ಅರೆವೈದ್ಯಕೀಯ ಸೇವೆ ಹಾಗೂ ಮಾನವ ಅಧ್ಯಯನಗಳು ಸೇರ್ಪಡೆಯಾಗುತ್ತವೆ.

ವೃತ್ತಿಶಿಕ್ಷಣಕ್ಕೆ ವಿಶೇಷ ಬೋಧನಾ ತಂತ್ರಗಳ ಆವಶ್ಯಕತೆ ಇರಬೇಕಾಗುತ್ತದೆ. ಈ ತಂತ್ರಗಳ ಕೆಳಗೆ ಶಾಲೆಗಳ ತರಬೇತಿ ಹಾಗೂ ಉತ್ಪಾದನಾ ಕೇಂದ್ರಗಳು, ಜ್ಞಾನ ಮತ್ತು ಕೌಶಲ್ಯಗಳನ್ನು ಹರಿತಗೊಳಿಸಲು ಮತ್ತು ಸಂಯೋಜಿಸಲು ಬೇಕಾಗುವ ಉದ್ಯೋಗಪೂರ್ವ ತರಬೇತಿ ಮತ್ತು ಕಾರ್ಯಕ್ಷೇತ್ರಗಳಲ್ಲಿನ ಅನುಭವ ಸೇರ್ಪಡೆಯಾಗುತ್ತದೆ.

**ಅಧ್ಯಾಯ ೪:** ಈ ಅಧ್ಯಾಯದಲ್ಲಿ ವಿದ್ಯಾರ್ಥಿಗಳ ಪ್ರಗತಿಯ ವ್ಯವಸ್ಥಿತ ಮೌಲ್ಯಮಾಪನಕ್ಕೆ ಬೇಕಾದ ವಿವಿಧ ಮೌಲ್ಯಮಾಪನ ವಿಧಾನಗಳನ್ನು ಪ್ರಸ್ತಾಪಿಸಲಾಗಿದೆ. ಬೋಧನೆ ಮತ್ತು ಕಲಿಕೆಯ ಒಟ್ಟಾರೆ ಸಂದರ್ಭದ ಚಟುವಟಿಕೆಗಳಲ್ಲಿ ಮೌಲ್ಯಮಾಪನಕ್ಕೆ ಒಂದು ವಿಶಿಷ್ಟ ಸ್ಥಾನವಿದೆ. ಪಠ್ಯ ಮತ್ತು ಸಹ ಪಠ್ಯವನ್ನು ಅಧ್ಯಯನ ಮಾಡುವ ವಿದ್ಯಾರ್ಥಿಗಳ ಪ್ರಗತಿಯನ್ನು ಅರಿಯಲು ಬೇಕಾದ ವ್ಯವಸ್ಥಿತವಾದ ಮಾಹಿತಿ ಸಂಗ್ರಹ, ವಿಶ್ಲೇಷಣೆ ಮತ್ತು ನಿರೂಪಣೆಗಳನ್ನು ಇದು ಒಳಗೊಂಡಿರುತ್ತದೆ. ಇದು ಅಧ್ಯಯನ ವಿಷಯದ ಪರಿಣಾಮಕತೆ, ತರಗತಿಯಲ್ಲಿಯ ಚಟುವಟಿಕೆಗಳು ಮತ್ತು ವಿದ್ಯಾರ್ಥಿಯ ವೈಯಕ್ತಿಕ ಬೆಳವಣಿಗೆಯ ಬಗ್ಗೆ ಅನುಕೂಲ ಹಿಮ್ಮಾಹಿತಿ(feedback)ಯನ್ನೊದಗಿಸುತ್ತದೆ. ಶಾಲಾ ಶಿಕ್ಷಣದ ಗುಣಮಟ್ಟದ ಮೇಲೆ ಪ್ರಭಾವ ಬೀರುವ ಶಕ್ತಿಯುತ ಅಂಗವಾಗಿ ಇದನ್ನು ಬಳಸಿಕೊಳ್ಳಬಹುದು. ವಿದ್ಯಾರ್ಥಿಯ ಕ್ಷೇಮಕರ ಬೆಳವಣಿಗೆಗಾಗಿ ಸೂಕ್ತ

ತೀರ್ಮಾನಗಳನ್ನು ತೆಗೆದುಕೊಳ್ಳುವುದಕ್ಕೆ ಅನುಕೂಲವಾಗಿರುವಂತೆ ಮೌಲ್ಯಮಾಪನವು ಸಹಜವಾಗಿ, ನಂಬಲರ್ಹವಾಗಿ, ಪಾರದರ್ಶಕವಾಗಿ, ಮಾನವೀಯವಾಗಿ ಮತ್ತು ಸಂಪೂರ್ಣ ಸ್ವಾತಂತ್ರ್ಯವನ್ನೊಳಗೊಂಡಂತೆ ಇರಬೇಕಾಗುತ್ತದೆ.

ಈಗಿನ ಮೌಲ್ಯಮಾಪನದ ಒಲವು ಪಠ್ಯ ವಿಷಯಗಳಿಗೆ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡುವುದಾಗಿದ್ದು ಸಹ ಪಠ್ಯ ವಿಷಯವನ್ನು ಪೂರ್ಣವಾಗಿ ಕಡೆಗಣಿಸುತ್ತದೆ. ಉನ್ನತ ಬೌದ್ಧಿಕ ಚಿಂತನೆಗಳಾದ ಸಮಸ್ಯೆಗಳ ಪರಿಹಾರ, ಸೃಜನಶೀಲ ಚಿಂತನೆ ಮುಂತಾದ ಸಾಮರ್ಥ್ಯ ಹಾಗೂ ಕೌಶಲಗಳನ್ನು ಬೆಳೆಸುವುದಕ್ಕಿಂತ ಹೆಚ್ಚಾಗಿ, ವಿಷಯಗಳ ಸ್ಮರಣ ವಿಧಾನಕ್ಕೆ ಹೆಚ್ಚು ಪ್ರಾಶಸ್ತ್ಯ ನೀಡಲಾಗಿದೆ. ಮಕ್ಕಳಲ್ಲಿರುವ ಸಹಜ ಸಾಮರ್ಥ್ಯವನ್ನು ಅಳೆಯಲಾಗಿಲ್ಲ. ಪಬ್ಲಿಕ್ ಪರೀಕ್ಷೆಯ ಭಯ ಮತ್ತು ಅನುತ್ತೀರ್ಣರಾಗುತ್ತಿರುವವರ ಸಂಖ್ಯೆ ಮಾನಸಿಕ ಉದ್ವೇಗವನ್ನು ಸೃಷ್ಟಿಸಿದ್ದು ಅದರ ಪರಿಣಾಮ ಎಲ್ಲೆಡೆ ಹರಡಿದ್ದು ಕೆಲವೊಮ್ಮೆ ಅತ್ಯಂತ ದಾರುಣಮಯ ಅನಾಹುತಗಳಲ್ಲಿ ಕೊನೆಗಾಣುತ್ತಿದೆ. ಈ ಪ್ರಕ್ರಿಯೆಯಲ್ಲಿ ಇದರ ಕಾರಣವನ್ನು ಕಂಡುಕೊಳ್ಳುವುದಕ್ಕೆ ಮತ್ತು ಪರಿಹಾರವನ್ನು ಕಂಡುಕೊಳ್ಳುವುದಕ್ಕೆ ಅವಕಾಶವೇ ಇಲ್ಲ. ಇವೆಲ್ಲಕ್ಕಿಂತ ಹೆಚ್ಚಾಗಿ ಪರೀಕ್ಷೆಗಳ ಹಿನ್ನಡೆಯ ಪರಿಣಾಮದಿಂದಾಗಿ ಬೋಧನೆಯ ಅವಕಾಶಗಳು ಸೀಮಿತವಾಗಿ, ಅವು ಕೆಲವೇ ಆಯ್ದ ವಿಷಯಗಳನ್ನು ಬೋಧಿಸುವ ಮೂಲಕ ಸಂಪೂರ್ಣ ಕಲಿಕೆಯ ಪರಿಕಲ್ಪನೆಯನ್ನು ನಿರಾಶೆಯತ್ತ ದೂಡುತ್ತವೆ.

ಪಠ್ಯ ಮತ್ತು ಸಹಪಠ್ಯದ ಕ್ಷೇತ್ರಗಳೆರಡರಲ್ಲಿಯೂ ವಿದ್ಯಾರ್ಥಿಯ ಸಾಮರ್ಥ್ಯಗಳನ್ನು ಹೆಚ್ಚಿಸುವ ಕಡೆಗೆ ಮೌಲ್ಯಮಾಪನವನ್ನು ಲಾಭದಾಯಕವಾಗಿ ಬೆಳೆಸಿಕೊಳ್ಳಬೇಕು. ಬೆಳವಣಿಗೆಯ ಹಂತದ ಸ್ವರೂಪಾತ್ಮಕ ಮೌಲ್ಯಮಾಪನ(Formative) ಮತ್ತು ಮುಕ್ತಾಯ ಹಂತದ ಸಾರಾಂಶಾತ್ಮಕ ಮೌಲ್ಯಮಾಪನ(Summative ) ಗಳೆರಡನ್ನೂ ಸದಭಿರುಚಿಯಿಂದ ಬಳಸಬೇಕು.ಮೊದಲನೇ ಮೌಲ್ಯಮಾಪನವನ್ನು ದುರ್ಬಲ ವಿದ್ಯಾರ್ಥಿಗಳ ಕಲಿಕೆಯ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವುದಕ್ಕೆ ಅನುಕೂಲವಾಗುವಂತೆಯೂ ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಹೆಚ್ಚಿನ ಸಹಾಯ ಒದಗಿಸಲು ಅನುಕೂಲವಾಗುವಂತೆಯೂ ಬಳಸಿಕೊಳ್ಳಬಹುದು. ಎರಡನೆಯ ಮೌಲ್ಯಮಾಪನವನ್ನು ಎಲ್ಲ ವಿದ್ಯಾರ್ಥಿಗಳನ್ನು ವರ್ಗೀಕರಿಸುವುದಕ್ಕೆ, ಸ್ಥಾನಮಾನಗಳ ನಿರ್ಣಯಕ್ಕೆ ಮತ್ತು ಮುಂದಿನ ತರಗತಿಗಳಿಗೆ ಬಡ್ತಿ ನೀಡುವುದಕ್ಕೆ ಬಳಸಿಕೊಳ್ಳಬಹುದು. ಇವುಗಳನ್ನು ಸ್ವಯಂ ಉಲ್ಲೇಖಿತ, ಮಾನದಂಡ ಉಲ್ಲೇಖಿತ ಮತ್ತು ರೀತಿ ಉಲ್ಲೇಖಿತವೆಂದು ಮೂರು ಮಟ್ಟಗಳಲ್ಲಿ ಪರಿಗಣಿಸಬಹುದು. ಒಳ್ಳೆಯ ಮೌಲ್ಯಮಾಪನದ ಆತ್ಯಂತಿಕ ಗುರಿಯೆಂದರೆ ವಿದ್ಯಾರ್ಥಿಗಳ ವ್ಯಕ್ತಿತ್ವದ ಸರ್ವತೋಮುಖ ಬೆಳವಣಿಗೆಗೆ ಸಹಾಯಮಾಡುವುದು. ಹತ್ತನೆ ತರಗತಿಗಿಂತ ಹಿಂದಿರುವ ತರಗತಿಗಳಿಗೆ ನಡೆಯುವ ಮೌಲ್ಯಮಾಪನ ಶಾಲೆಗಳ ನೆಲೆಯಲ್ಲೇ ನಡೆಯಬೇಕು. ಹಾಗೂ ಆ ಮೌಲ್ಯಮಾಪನವು ಲಕ್ಷಣದಲ್ಲಿ ನಿರಂತರವಾಗಿ ಮತ್ತು ಸಮಗ್ರವಾಗಿ ಇರಬೇಕಾಗಿರುತ್ತದೆ. ಪ್ರಥಮ ಪಬ್ಲಿಕ್ ಪರೀಕ್ಷೆ, ಪಠ್ಯದ ವಿಷಯಗಳಿಗೆ ಮಾತ್ರ ಸೀಮಿತವಾಗಿದ್ದು ಅದನ್ನು ಬೋರ್ಡುಗಳು ನಡೆಸಬೇಕು. ಸಹ ಪಠ್ಯ ವಿಷಯಗಳನ್ನು ಕುರಿತು ಮೌಲ್ಯಮಾಪನವನ್ನು ಶಾಲಾ ನೆಲೆಯಲ್ಲೇ ನಡೆಸಿ ಅವುಗಳಿಗೆ ಸೂಕ್ತ ದರ್ಜೆಗಳನ್ನು ನೀಡಬೇಕಾಗುತ್ತದೆ.

ಪೂರ್ವ ಪ್ರಾಥಮಿಕ ಹಂತದಲ್ಲಿ ಔಪಚಾರಿಕ ಮೌಲ್ಯಮಾಪನದ ಆವಶ್ಯಕತೆ ಇರುವುದಿಲ್ಲ. ಇಲ್ಲಿ ಮೌಲ್ಯಮಾಪನ ಬೆಳವಣಿಗೆಯ ಹಂತದ ಸ್ವರೂಪಾತ್ಮಕವಾಗಿದ್ದು , ಕೈಗೊಳ್ಳುವ ಪರಿಹಾರಾತ್ಮಕ ಪ್ರಯತ್ನಗಳು ಕಲಿಕೆಯ ಒಂದು ಭಾಗವಾಗಿರುವಂತೆಯೇ ತೋರಬೇಕಾಗುತ್ತದೆಯೇ ಹೊರತು ವಿದ್ಯಾರ್ಥಿಗಳಿಗೆ ಅದು ಮೌಲ್ಯಮಾಪನವೆಂದು ಮನವರಿಕೆಯಾಗಬಾರದು.

ಬೆಳವಣಿಗೆಯ ಹಂತದ ಸ್ವರೂಪಾತ್ಮಕ ಮೌಲ್ಯಮಾಪನ ಪ್ರಾಥಮಿಕ ಹಂತದಲ್ಲೂ ಮುಂದುವರಿಯಲಿದ್ದು ಅಲ್ಲಿ ಸಾತ್ಯತೆ ಮತ್ತು ಸಮಗ್ರತೆಗೆ ಹೆಚ್ಚು ಒತ್ತುಕೊಡಲಾಗುತ್ತದೆ. ಪರಿಶೀಲನೆ ಮತ್ತು ಮೌಖಿಕ ತಂತ್ರಗಳನ್ನು ವ್ಯಾಪಕವಾಗಿ ಬಳಸಬೇಕಾಗುತ್ತದೆ. ಲಿಖಿತ ಪರೀಕ್ಷೆಯನ್ನು ಮೂರನೇ ತರಗತಿಯಲ್ಲಿ ಪ್ರಾರಂಭಿಸಬೇಕಾಗುತ್ತದೆ. ಮಾನದಂಡ ಉಲ್ಲೇಖಿತ ಪರೀಕ್ಷೆಗಳ (Criterion Reference) ಮತ್ತು ಪರಿಹಾರ ಬೋಧನಾ ಚಟುವಟಿಕೆಗಳ (Remidial measures) ಬಳಕೆ ಉನ್ನತ ಮಟ್ಟವನ್ನು ಸಾಧಿಸಲು ಸಹಾಯ ಮಾಡುತ್ತವೆ.ಪಠ್ಯವಿಷಯಗಳಿಗೆ ಸಂಬಂಧಿಸಿದಂತೆ ವಿದ್ಯಾರ್ಥಿಯ ಕಲಿಕಾ ಸಾಧನೆಯನ್ನು ಮೂರು ಶ್ರೇಣಿಗಳನ್ನು ಸೂಚಿಸುವ ಸಮಗ್ರ ದರ್ಜೀಕರಣದಲ್ಲಿ ನಮೂದಿಸಬೇಕಾಗುತ್ತದೆ. ಸಹ ಪಠ್ಯದ ವಿಷಯಗಳಿಗೆ ಸಂಬಂಧಿಸಿದಂತೆ ಮೂರು ಶ್ರೇಣಿಯಲ್ಲಿ ನೇರ ದರ್ಜೀಕರಣದಲ್ಲಿ ನಮೂದಿಸಬೇಕು. ಸಹ ಪಠ್ಯದ ವಿಷಯಕ್ಕೆ ಸಂಬಂಧಿಸಿದ ಮೌಲ್ಯ ಮಾಪನವನ್ನು , ಪ್ರತಿ ಮೂರು ತಿಂಗಳಿಗೊಮ್ಮೆ ನಡೆಸಿ ವರದಿಯನ್ನು ಸಲ್ಲಿಸಬೇಕು. ಸಂಚಿತದಾಖಲೆಯ ಕಾರ್ಡುಗಳನ್ನು(Cumulative Record cards) ನಿರಂತರವಾಗಿ ಬಳಸಬೇಕು.

ಉನ್ನತ ಪ್ರಾಥಮಿಕ ಮಟ್ಟದಲ್ಲಿ ಮೌಖಿಕ ಮತ್ತು ಲಿಖಿತ ಪರೀಕ್ಷೆಗಳನ್ನು ಮಾಡುವುದರ ಜೊತೆಗೆ ವಿದ್ಯಾರ್ಥಿಗಳಿಗೆ ಕಾಲದಿಂದ ಕಾಲಕ್ಕೆ ಕೊಡುವ ನಿಯೋಜಿತ ಕೆಲಸಗಳು ಮತ್ತು ಯೋಜನಾಕಾರ್ಯಗಳನ್ನು ಕೂಡ ಸತತ ಹಾಗೂ ಸಮಗ್ರ ಮೌಲ್ಯಮಾಪನದ ಒಳಗೆ ತರಬೇಕಾಗುತ್ತದೆ. ವಿದ್ಯಾರ್ಥಿಯು ಪಡೆದುಕೊಂಡಿರಬಹುದಾದ ಉನ್ನತ ಮಟ್ಟವನ್ನು ಅಳೆಯಲು ಕಾಲದಿಂದ ಕಾಲಕ್ಕೆ ಮಾನದಂಡ ಉಲ್ಲೇಖಿತ ಪರೀಕ್ಷೆಗಳನ್ನು ಬಳಸಬಹುದು. ಸಹ ಪಠ್ಯ ಸಾಮರ್ಥ್ಯಗಳಿಕೆಯ ಅಂಶಗಳನ್ನು ಪರಿಶೀಲನಾ ಮಾನದಂಡ ಮತ್ತು ತಪಾಸಣಾ ವಿಧಾನದ ಮೂಲಕ ಅಳೆದು ತ್ರೈಮಾಸಿಕ ವರದಿಯನ್ನು ನೀಡಬೇಕು. ಕಲಿಕೆಯ ಸಮಸ್ಯೆಯನ್ನು ಕಂಡುಹಿಡಿದುಕೊಂಡು ಅದಕ್ಕೆ ಬೇಕಾದ ಪರಿಹಾರವನ್ನು ಒದಗಿಸಿಕೊಂಡು ಬೋಧಿಸುವ ಚಟುವಟಿಕೆ ನಿರಂತರ ಲಕ್ಷಣವಾಗಿರಬೇಕು. ಈ ಘಟ್ಟದಲ್ಲಿ ಪಠ್ಯವಿಷಯಕ್ಕೆ ಸಂಬಂಧಿಸಿದಂತೆ ಐದು ಶ್ರೇಣೀಕೃತ ದರ್ಜೆಗಳನ್ನು ಬಳಸಬೇಕಾಗುತ್ತದೆ. ಸಹ ಪಠ್ಯವಿಷಯಕ್ಕೆ ಸಂಬಂಧಿಸಿದಂತೆ ಮೂರು ಶ್ರೇಣೀಕೃತ ನೇರ ದರ್ಜೀಕರಣ ದಾಖಲೆ ಅನುಕೂಲಕ್ಕಾಗಿ ಮುಂದುವರಿಯುತ್ತದೆ. ಸ್ವ ಮೌಲ್ಯಮಾಪನ ಮತ್ತು ನಿರ್ದಿಷ್ಟ ಗುಂಪಿನ ಮೌಲ್ಯಮಾಪನ ಸಮಗ್ರ ಮೌಲ್ಯಮಾಪನದ ಒಂದು ಭಾಗವಾಗಿ ಮುಂದುವರಿಯುತ್ತದೆ.

ಪ್ರೌಢಶಾಲಾಮಟ್ಟದ ಕೋರ್ಸುಗಳನ್ನು ನಾಲ್ಕು ಷಾಣ್ಮಾಸಿಕ ಅವಧಿಗೆ ಘಟಕಗಳಾಗಿ ವಿಂಗಡಿಸಲಾಗುವುದು. ಸಾತತ್ಯ ಮತ್ತು ಸಮಗ್ರ ವಿಧಾನದ ಮೌಲ್ಯಮಾಪನ ಶಾಲಾ ನೆಲೆಯಲ್ಲೇ ನಡೆಯುತ್ತದೆ. ಕಾಲಕಾಲಕ್ಕೆ ಮಾನದಂಡ ಉಲ್ಲೇಖಿತ ಪರೀಕ್ಷೆಗಳನ್ನು ನಡೆಸಲಾಗುವುದು. ಪಠ್ಯವಿಷಯಗಳಿಗೆ ಸಂಬಂಧಿಸಿದಂತೆ ಒಂಬತ್ತು ಶ್ರೇಣೀಕೃತ ಸಮಗ್ರ ದರ್ಜೀಕರಣದ ಆವಶ್ಯಕತೆ ಇರುತ್ತದೆ. ಸಹಪಠ್ಯ ವಿಷಯಗಳಿಗೆ ಐದು ಶ್ರೇಣೀಕೃತ ನೇರ ದರ್ಜೀಕರಣವನ್ನು ಬಳಸಿಕೊಂಡು ಪರಿಶೀಲನೆ, ತಪಾಸಣಾ ವಿಧಾನ ಮತ್ತು ಮೌಲ್ಯ ನಿರ್ಣಯದ ಮೂಲಕ ಅಳೆಯಲಾಗುವುದು. ಸಂಚಿತ ದಾಖಲೆಯ ಕಾರ್ಡುಗಳನ್ನು ಬಳಸಿಕೊಳ್ಳಲಾಗುವುದು. ವಿದ್ಯಾರ್ಥಿಗಳ ಸಾಧನಾ ದಾಖಲೆಯಲ್ಲಿ ಅವರವರ ವೈಯಕ್ತಿಕ ವಿವರಗಳು ಮತ್ತು ನಿರ್ದಿಷ್ಟ ಗುಂಪಿನ ಮೌಲ್ಯಮಾಪನದ ವಿವರಗಳು ಸೇರಿರುತ್ತವೆ. ಬಾಹ್ಯ ಪರೀಕ್ಷೆಗಳ ಆಧಿಪತ್ಯ ಕಡಿಮೆಯಾಗಿ, ಹತ್ತನೇ ತರಗತಿಯವರೆಗೆ ಉತ್ತೀರ್ಣತೆ ಮತ್ತು ಅನುತ್ತೀರ್ಣತೆಗಳನ್ನು ಘೋಷಿಸುವುದನ್ನು ನಿಲ್ಲಿಸಲಾಗುವುದು.

ಉನ್ನತ ಪ್ರೌಢಶಾಲಾ ಮಟ್ಟದಲ್ಲಿ ಸಂಚಿತ ಪದ್ಧತಿ (Credit System) ಯನ್ನು ಉಪಯೋಗಿಸಿಕೊಂಡು ೪ ಷಾಣ್ಮಾಸಿಕ ವಿಭಾಗಗಳಾಗಿ ವಿಂಗಡಿಸಲಾಗುವುದು. ಮೊದಲ ಮೂರು ಷಾಣ್ಮಾಸಿಕ ಅವಧಿಯ ಮೌಲ್ಯಮಾಪನದ ಜವಾಬ್ದಾರಿ ಆಯಾ ಶಾಲೆಗಳದ್ದಾಗಿರುತ್ತದೆ. ನಾಲ್ಕನೇ ಷಾಣ್ಮಾಸಿಕ ಪರೀಕ್ಷೆಯನ್ನು ಬೋರ್ಡುಗಳು ನಡೆಸಿಕೊಡುತ್ತವೆ. ಇದರಿಂದಾಗಿ ವಿದ್ಯಾರ್ಥಿಗಳು ತಮ್ಮ ಸಾಮರ್ಥ್ಯ ಮತ್ತು ವೇಗಕ್ಕನುಗುಣವಾಗಿ ಸಂಚಿತ

ಮೌಲ್ಯಗಳನ್ನು ಗಳಿಸಿಕೊಳ್ಳಲು ಅನುಕೂಲವಾಗುತ್ತದೆ. ಟ್ಯುಟೋರಿಯಲ್‌ಗಳನ್ನು ಆರಂಭಿಸಲಾಗುವುದು ಹಾಗೂ ಶಾಲೆಗಳು ಮಾನದಂಡ ಉಲ್ಲೇಖಿತ ಪರೀಕ್ಷೆಗಳ ಮೇಲೆ ಕೇಂದ್ರೀಕರಿಸುವುವು.

ಪಠ್ಯ ಸಂಬಂಧಿತ ವಿಷಯಗಳನ್ನು ಶಾಲಾ ನೆಲೆಯಲ್ಲಿ ಮೌಲ್ಯಮಾಪನ ಮಾಡುವಾಗ ಒಂಬತ್ತು ಶ್ರೇಣೀಕೃತ ಸಮಗ್ರ ದರ್ಜೀಕರಣವನ್ನು ಬಳಸಿಕೊಳ್ಳಲಾಗುವುದು. ಇಲ್ಲಿ ಅಂಕಗಳನ್ನು ನೇರವಾಗಿ ಶ್ರೇಣಿಗೆ ಬದಲಿಸಲಾಗುವುದು. ಸಹಪಠ್ಯ ಸಂಬಂಧಿತ ವಿಷಯಗಳ ಮೌಲ್ಯಮಾಪನ ಮಾಡುವಾಗ ಐದು ಶ್ರೇಣೀಕೃತ ನೇರ ದರ್ಜೀಕರಣವನ್ನು ಬಳಸಿಕೊಳ್ಳಲಾಗುವುದು. ಶಾಲೆಗಳು ಮೂರನೇ ಷಾಣ್ಮಾಸಿಕದಲ್ಲಿ ವಿದ್ಯಾರ್ಥಿಗಳು ಪಠ್ಯಾಧಾರಿತ ವಿಷಯದಲ್ಲಿ ಪಡೆದಿರುವಂತಹ ಶ್ರೇಣಿಗಳನ್ನು ಮತ್ತು ಮೂರು ಹಾಗೂ ನಾಲ್ಕನೇ ಷಾಣ್ಮಾಸಿಕದಲ್ಲಿ ಸಹ ಪಠ್ಯ ವಿಷಯಗಳಲ್ಲಿ ಪಡೆದುಕೊಂಡ ಶ್ರೇಣಿಗಳನ್ನು ಅಂತಿಮ ಫಲಿತಾಂಶದ ಪಟ್ಟಿಯಲ್ಲಿ ಸೇರಿಸಲು ಬೋರ್ಡುಗಳಿಗೆ ಬರೆದು ತಿಳಿಸಲಾಗುವುದು. ಶ್ರೇಣಿಗಳನ್ನು ಉತ್ತಮಪಡಿಸಿಕೊಳ್ಳಲು ಬೇಕಾದ ಅವಕಾಶಗಳನ್ನು ಕಲ್ಪಿಸಿಕೊಳ್ಳಲಾಗುವುದು.

ಶಾಲಾ ಶಿಕ್ಷಣದ ಪ್ರತಿಯೊಂದು ಘಟ್ಟದ ಕೊನೆಯಲ್ಲಿ ನಿರ್ದಿಷ್ಟ ಶಿಕ್ಷಣ ಮಟ್ಟವೊಂದನ್ನು ಕಾಪಾಡಿಕೊಂಡು ಬರುವ ದೃಷ್ಟಿಯಿಂದ ಕಾಲಕಾಲಕ್ಕೆ ವಿದ್ಯಾರ್ಥಿಗಳ ಸಾಧನೆಯನ್ನು ಕಂಡುಕೊಳ್ಳಲು ಸಾಧನಾ ಸರ್ವೇಕ್ಷಣಗಳನ್ನು (surveys) ನಡೆಸಲಾಗುವುದು. ಇದಕ್ಕಾಗಿ ಪ್ರಮಾಣೀಕೃತ ಪರೀಕ್ಷೆಗಳನ್ನು ಬಳಸಿಕೊಳ್ಳಲಾಗುವುದು. ಈ ಸರ್ವೇಕ್ಷಣಗಳಿಂದ ಮೂಡಿಬರುವ ಫಲಿತಾಂಶಗಳನ್ನು ಸರಿಯಾಗಿ ಯೋಜಿಸಿ ಮತ್ತು ವಿನ್ಯಾಸಗೊಳಿಸಿ ಸೂಕ್ತ ಸುಧಾರಣೆಗಳನ್ನು ತರುವುದಕ್ಕೆ ಬಳಸಿಕೊಳ್ಳಲಾಗುವುದು. ಜೊತೆಗೆ ಸಾಂಸ್ಥಿಕ, ಪ್ರಾದೇಶಿಕ, ರಾಜ್ಯ ಮತ್ತು ರಾಷ್ಟ್ರ ಮಟ್ಟದ ಸಮಗ್ರ ಚಿತ್ರಣ ಕೊಡಲು ಬಳಸಿಕೊಳ್ಳಬಹುದು. ಮೌಲ್ಯಮಾಪನ ನಡೆಸಲು ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಳ್ಳಬಹುದು. ಅವು ಶೀಘ್ರ ಮತ್ತು ಹೆಚ್ಚು ಖಚಿತ ಫಲಿತಾಂಶಗಳನ್ನು ಪಡೆಯಲು ನೆರವಾಗುತ್ತವೆ.

ಹತ್ತು ಮತ್ತು ಹನ್ನೆರಡನೇ ತರಗತಿಗಳಿಗೆ ಪರೀಕ್ಷೆಗಳನ್ನು ನಡೆಸಿರುವ ಮೂವತ್ತನಾಲ್ಕು ಬೋರ್ಡುಗಳ ಅನುಭವದ ಪ್ರಕಾರ ಪರೀಕ್ಷಾ ಮಟ್ಟದಲ್ಲಿ ವ್ಯಾಪಕವಾದ ಅಸಮತೋಲನ ಇರುವುದು ಕಂಡುಬಂದಿದೆ. ಅಲ್ಲದೆ ತಮ್ಮ ಪರೀಕ್ಷೆಯ ಫಲಿತಾಂಶಗಳನ್ನು ಸಮೀಕರಿಸುವುದಕ್ಕಾಗಿ ಅವುಗಳಿಗೆ ಸಾಮಾನ್ಯ ರೂಪದ ಅಥವಾ ರಾಷ್ಟ್ರ ಮಟ್ಟದ ನಿರ್ದಿಷ್ಟ ಸಾಧನ ಮಟ್ಟಗಳನ್ನು ಕಂಡುಕೊಳ್ಳಲು ಸಾಧ್ಯವಾಗಿಲ್ಲ. ಇದರಿಂದಾಗಿ ವೃತ್ತಿಪರ ಸಂಸ್ಥೆಗಳಾದ ಇಂಜಿನಿಯರಿಂಗ್, ವೈದ್ಯಕೀಯ ಶಿಕ್ಷಣ ಮತ್ತು ಮ್ಯಾನೇಜ್ಮೆಂಟ್ ಮುಂತಾದುವು ಅನೇಕ ರೀತಿಯ ಪ್ರವೇಶ ಪರೀಕ್ಷೆಗಳನ್ನು ನಡೆಸುತ್ತಿವೆ. ಇವು ವಿದ್ಯಾರ್ಥಿಗಳ ಮತ್ತು ಪೋಷಕರ ಮನಸ್ಸಿನ ಮೇಲೆ ಅನಪೇಕ್ಷಿತ ಒತ್ತಡ ಮತ್ತು ಗೊಂದಲಗಳನ್ನು ಸೃಷ್ಟಿಸುತ್ತವೆ. ಅಲ್ಲದೆ ಅನೀತಿಯುತ ಚಟುವಟಿಕೆಗಳಿಗೆ ಹಾಗೂ ಅನಾವಶ್ಯಕ ವೆಚ್ಚಗಳಿಗೆ ಅನುವು ಮಾಡಿಕೊಡುತ್ತಿವೆ. ಗುಣಮಟ್ಟವನ್ನು ನಿಯಂತ್ರಿಸಲು ಮತ್ತು ದೇಶದಾದ್ಯಂತ ನಿರ್ದಿಷ್ಟ ಮಾನದಂಡವನ್ನು ಕಾಪಾಡಿಕೊಂಡು ಬರಲು ರಾಷ್ಟ್ರಮಟ್ಟದ ಸಂಸ್ಥೆಯೊಂದನ್ನು ಸ್ಥಾಪಿಸುವ ತುರ್ತು ಅಗತ್ಯವಿದೆ. ರಾಷ್ಟ್ರೀಯ ಶಿಕ್ಷಣ ನೀತಿ (೧೯೮೬) ಮತ್ತು ಕ್ರಿಯಾ ಯೋಜನೆ(೧೯೯೨) ಶಿಫಾರಸು ಮಾಡಿರುವ ಹಾಗೆ ರಾಷ್ಟ್ರೀಯ ಮೌಲ್ಯಮಾಪನ ಸಂಸ್ಥೆಯೊಂದನ್ನು ಸ್ಥಾಪಿಸಬೇಕಾಗಿದೆ. ಇಂತಹ ಒಂದು ಸಂಸ್ಥೆ, ಸ್ವಯಂಪ್ರೇರಣೆ ಆಧಾರದ ಮೇಲೆ ತುಲನಾತ್ಮಕ ರೀತಿ ನೀತಿಯೊಂದನ್ನು ಅಳವಡಿಸಿಕೊಂಡು ರಾಷ್ಟ್ರದಾದ್ಯಂತ ಪರೀಕ್ಷೆಗಳನ್ನು ನಡೆಸಲು ಸಾಧ್ಯವಾಗುತ್ತದೆ. ಇದು ಅಭಿವೃದ್ಧಿ ಕಾರ್ಯಕ್ರಮಗಳಿಂದ ಹಿಡಿದು ವಿದ್ಯಾರ್ಥಿಗಳ ಮೌಲ್ಯಮಾಪನದ ಮೇಲೆ ಪ್ರತ್ಯಕ್ಷ ಪ್ರಭಾವ ಬೀರುವಂತಹ ಸಂಶೋಧನೆಗಳವರೆಗೆ ಅನೇಕ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳಬಹುದು. ಇದು ಲಾಭಗಳಿಕೆಯೇತರ ಸಂಸ್ಥೆಯಾಗಿರಬೇಕು.

**ಅಧ್ಯಾಯ ೫ :** ಈ ಅಧ್ಯಾಯದಲ್ಲಿ ರಾಷ್ಟ್ರೀಯ ವ್ಯಾಸಂಗಕ್ರಮ ಚೌಕಟ್ಟನ್ನು (National Curriculam Framework) ಅನುಷ್ಠಾನಕ್ಕೆ ತರುವ ಮಾರ್ಗೋಪಾಯಗಳನ್ನು ಪ್ರಸ್ತಾಪಿಸಲಾಗಿದೆ. ವ್ಯಾಸಂಗಕ್ರಮದ ಚೌಕಟ್ಟು ಶಿಕ್ಷಣ ವ್ಯವಸ್ಥೆಗೆ ಬೇಕಾದ ನಿರ್ದೇಶನಗಳನ್ನು ಒದಗಿಸಿದೆ. ಇದರ ಅನುಷ್ಠಾನವು ಉದ್ದೇಶಿತ ಪರಿಣಾಮಗಳನ್ನು ಸಾಧಿಸಲು ಅನುಕೂಲ ಮಾಡಿಕೊಡಲಿದ್ದು, ಆದರ ಪರಿಣಾಮ ಅಧ್ಯಾಪಕರು ಚೌಕಟ್ಟನ್ನು ಹೇಗೆ ಅರ್ಥ ಮಾಡಿಕೊಳ್ಳುತ್ತಾರೆ ಮತ್ತು ಬದ್ಧನಿರ್ವಹಣೆ, ರಾಜಕೀಯ ಇಚ್ಛೆ ಮತ್ತು ಒಳದೃಷ್ಟಿ ಹೇಗೆ ಕೆಲಸ ಮಾಡುತ್ತದೆ ಎಂಬುದನ್ನು ಅವಲಂಬಿಸಿದೆ. ವ್ಯಾಸಂಗಕ್ರಮದ ಚೌಕಟ್ಟನ್ನು ಯಶಸ್ವಿಯಾಗಿ ಪ್ರಾಯೋಗಿಕತೆಗೆ ತರಲು ಬಹುಮುಖೀ ಮಾರ್ಗೋಪಾಯಗಳ ಅಗತ್ಯವಿದ್ದು ಬೇರೆಬೇರೆ ಸಂಸ್ಥೆಗಳನ್ನು ಮತ್ತು ಕೆಳಗೆ ನಮೂದಿಸಿರುವ ಅಂಶಗಳನ್ನು ಗಣನೆಗೆ ತಂದುಕೊಳ್ಳಬೇಕಾಗುತ್ತದೆ:

- ಎರಡು ವರ್ಷ ಅವಧಿಯ ಶಾಲಾಪೂರ್ವ ಅನುಭವದ ನಂತರ ಸಮಾನ ರೂಪವುಳ್ಳ ೧೦ + ೨ + ೩ ಶೈಕ್ಷಣಿಕ ಸ್ವರೂಪ.
- ಹೊಸ ಜನಾಂಗಕ್ಕೆ ಬೇಕಾದ ಶೈಕ್ಷಣಿಕ ಸಾಮಗ್ರಿಗಳನ್ನು ಮುದ್ರಣ ಮತ್ತು ಮುದ್ರಣೇತರ ರೂಪಗಳಲ್ಲಿ ಅಭಿವೃದ್ಧಿಗೊಳಿಸುವುದು.
- ಅಧ್ಯಾಪಕರಿಗೆ, ಶೈಕ್ಷಣಿಕ ಸಿಬ್ಬಂದಿ ವರ್ಗದವರಿಗೆ ಮತ್ತು ಸಮುದಾಯಕ್ಕೆ ಪರಿಣಾಮಕಾರಿ ವಿಷಯ ಪರಿಚಯ ಕಾರ್ಯಕ್ರಮಗಳ ಅನುಷ್ಠಾನ.
- ಕಾರ್ಯ ನಿರ್ವಾಹಕ ಮತ್ತು ತಾಂತ್ರಿಕ ಬೆಂಬಲಿತ ವ್ಯವಸ್ಥೆಗಳನ್ನು ಬಲಯುತ ಪಡಿಸುವುದು.
- ಮಧ್ಯಾವಧಿ ತಿದ್ದುಪಡಿಗಳನ್ನು ಗರ್ಭೀಕರಿಸಿಕೊಂಡ ಪರಿಣಾಮಕಾರೀ ನಿಯಂತ್ರಣ ವ್ಯವಸ್ಥೆ.

ಬೇರೆಬೇರೆ ಶೈಕ್ಷಣಿಕ ಮಟ್ಟದಲ್ಲಿ ಸ್ಥಳೀಯ ಸಂಸ್ಥೆಗಳನ್ನು ಒಳಗೊಂಡು ತಯಾರಿಸುವ ಕೇಂದ್ರೀಕೃತ ವ್ಯಾಸಂಗಕ್ರಮ, ಪಠ್ಯಕ್ರಮ ಮತ್ತು ಬೋಧನಾ ಸಾಮಗ್ರಿಗಳು, ಸ್ಥಳೀಯ ಅಗತ್ಯ ಮತ್ತು ಆಶಯಗಳನ್ನು ಒಳಗೊಳ್ಳುವುದಕ್ಕೆ ಸಹಾಯ ಮಾಡುತ್ತವೆ. ಪಠ್ಯ ಮತ್ತು ಸಹ ಪಠ್ಯದ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ವಿವರವಾದ ವ್ಯಾಸಂಗಕ್ರಮದ ಮಾರ್ಗದರ್ಶನಗಳು, ಮಾದರಿ ಪಠ್ಯಕ್ರಮ ಮತ್ತು ಸಾಮರ್ಥ್ಯಾಧಾರಿತ ಹಾಗೂ ಪ್ರಕ್ರಿಯೆ ಆಧಾರಿತ ಸಾಮಗ್ರಿಗಳನ್ನು ತಯಾರು ಮಾಡುವಾಗ ಎರಡೂ ಕ್ಷೇತ್ರಗಳಿಗೆ ಸಮಾನ ಪ್ರಾಮುಖ್ಯ ನೀಡಬೇಕು. ಇದು ಔಪಚಾರಿಕ ಮತ್ತು ಪರ್ಯಾಯ ವಿಧಾನಗಳಲ್ಲಿ ಕಲಿಯುವಾಗ ಸಂತೋಷದಾಯಕ ಸ್ವಯಂಕಲಿಕೆ ಮತ್ತು ಸ್ವಯಂ ನಿರ್ದೇಶಿತ ಕಲಿಕೆಗಳಿಗೆ ಸಹಾಯ ಮಾಡುತ್ತದೆ. ಅಲ್ಲದೆ ಪಠ್ಯ ಪುಸ್ತಕಗಳ ಘಟಿಕಾಧಾರಿತಕಟ್ಟುಗಳು, ಚಟುವಟಿಕೆಯ ಪುಸ್ತಕಗಳು, ಅಧ್ಯಾಪಕರ ಕೈಪಿಡಿಗಳು, ಬಹುಮಾಧ್ಯಮ ಸಾಮಗ್ರಿಗಳು ಮತ್ತು ಪೋಷಕರಿಗೆ ಮತ್ತು ಸಮುದಾಯಕ್ಕೆ ಹಾಗೂ ನಿರ್ವಾಹಕರಿಗೆ ಸಂಕ್ಷಿಪ್ತಗೊಳಿಸಿದ ವಿಷಯ ಪರಿಚಯ ಸಾಮಗ್ರಿಗಳು ತಯಾರಾಗಿ ಅಳವಡಿಕೆಯಾಗಬೇಕು. ಮತ್ತು ರೂಪಾಂತರವಾಗಿ ಎಲ್ಲ ಭಾರತೀಯ ಭಾಷೆಯಲ್ಲಿಯೂ ಲಭ್ಯವಾಗಬೇಕು. ಎಲ್ಲ ಹಂತಗಳಲ್ಲಿಯೂ ಕಾರ್ಯನಿರ್ವಹಣಾ ರೀತಿಯಲ್ಲಿ ಸಾಕಷ್ಟು ಸ್ವಾತಂತ್ರ್ಯವನ್ನು ಪಡೆದುಕೊಂಡಿರಬೇಕು. ಭೌತಿಕ ಮತ್ತು ಇನ್ನಿತರ ಸಂಪನ್ಮೂಲಗಳನ್ನು ಸಾಧ್ಯವಾದಷ್ಟು ಸಮುದಾಯ ಮತ್ತು ಗ್ರಾಮೀಣ ಹಾಗೂ ಪಟ್ಟಣದ ಪರಿಸರಗಳಿಂದ ಪಡೆದುಕೊಳ್ಳಬೇಕು. ದೋಷರಹಿತ ವ್ಯಾಸಂಗಕ್ರಮದ ಅಭಿವೃದ್ಧಿಯ ಪ್ರಯತ್ನಕ್ಕೆ ಆಳವಾದ ಸಂಶೋಧನಾ ನೆಲೆಗಟ್ಟು ಬೇಕಾಗುತ್ತದೆ. ಎನ್ ಸಿ ಇ ಆರ್‌ಟಿ ಮತ್ತು ಎಸ್ ಸಿ ಇ ಆರ್ ಟಿಗಳು ಮತ್ತು ಇದೇ ರೀತಿಯ ಇನ್ನಿತರ ಸಂಘ ಸಂಸ್ಥೆಗಳು ತಮ್ಮ ಸಂಶೋಧನಾ ಅನುಭವವನ್ನು ನೀಡಿ ಪ್ರೋತ್ಸಾಹಿಸಬೇಕು. ಶಿಕ್ಷಣ ಸಂಸ್ಥೆಗಳ ವೃತ್ತಿಪರ ಧೋರಣೆಯನ್ನು ಇತ್ಯಾತ್ಮಕವಾಗಿ ನೋಡುವುದರ ಮೂಲಕ ಅದರಲ್ಲಿ ಸಾಮರ್ಥ್ಯ ತುಂಬುವ ಪ್ರಯತ್ನವನ್ನು ಮಾಡಬೇಕಾಗುತ್ತದೆ.

ಶಿಕ್ಷಣಪೂರ್ವ ವ್ಯಾಸಂಗಕ್ರಮವು ಈ ಹೊಸ ವ್ಯಾಸಂಗಕ್ರಮದ ಚೌಕಟ್ಟಿನಿಂದ ಮೂಡಿಬರುವ ಹೊಸ ಕಳಕಳಿಗಳು ಮತ್ತು ಸಮಸ್ಯೆಗಳನ್ನು ತನ್ನ ವ್ಯಾಸಂಗಕ್ರಮದಲ್ಲಿ ಅಳವಡಿಸಿಕೊಳ್ಳಬೇಕು. ಅಲ್ಲದೆ ವಿಷಯ ಮತ್ತು ಶೈಕ್ಷಣಿಕಾಂಶಗಳ ಸಮನ್ವಯತೆ ವ್ಯಾಸಂಗಕ್ರಮವನ್ನು ರೂಪಿಸುವಾಗ ಸಂಬಂಧಿಸಿದ ಸಾಮರ್ಥ್ಯಗಳು ಮುಂತಾದವುಗಳನ್ನು ಅಭಿವೃದ್ಧಿ ಪಡಿಸಬೇಕಾಗುತ್ತದೆ. ಇದನ್ನು ನಿರಂತರ ಸೇವಾ ತರಬೇತಿಯಲ್ಲಿ ಸರಣೀಕ್ರಮ(cascade) ಮತ್ತು ದೂರಸಮಾಲೋಚನೆಯ(teleconference) ಮೂಲಕ ಪುನರ್ಮನನ ಮಾಡಬಹುದು.

ಮುಖ್ಯೋಪಾಧ್ಯಾಯರುಗಳು ಮತ್ತು ಪ್ರಾಂಶುಪಾಲರುಗಳು ವ್ಯಾಸಂಗಕ್ರಮದ ಅನುಷ್ಠಾನದಲ್ಲಿ ಪ್ರಮುಖ ಸಚೇತಕರಾಗಿ ಕಾರ್ಯಕ್ರಮ ನಿರ್ವಹಿಸುವುದರಿಂದ ಅವರುಗಳಿಗೆ ಮತ್ತು ಆಡಳಿತಾಧಿಕಾರಿಗಳಿಗೆ ವಿಷಯಗ್ರಹಣ ತರಬೇತಿ ಅಪೇಕ್ಷಣೀಯ.ಸೂಕ್ತ ಉಸ್ತುವಾರಿ ಆಡಳಿತಯಂತ್ರದ ಮುಖಾಂತರ ಪ್ರಾಮಾಣಿಕ ಮತ್ತು ಪರಿಣಾಮಕಾರಿ ಅನುಷ್ಠಾನವನ್ನು ದೃಢೀಕರಿಸಿಕೊಳ್ಳುವುದಕ್ಕೆ ಇದು ನೆರವಾಗುತ್ತದೆ.

ಪ್ರಾಥಮಿಕ ಮತ್ತು ಪ್ರೌಢಮಟ್ಟದಲ್ಲಿ ಅಧ್ಯಾಪಕರುಗಳ ತಯಾರಿಯಲ್ಲಿ ತೊಡಗಿರುವ ಶಿಕ್ಷಣ ಸಂಸ್ಥೆಗಳನ್ನು ವ್ಯಾಸಂಗಕ್ರಮದ ತಯಾರಿ, ಆದರ ನಿರ್ವಹಣೆ ಮತ್ತು ಮೌಲ್ಯಮಾಪನದ ಎಲ್ಲ ಘಟ್ಟಗಳಲ್ಲಿ ದೊಡ್ಡ ಪ್ರಮಾಣದಲ್ಲಿಯೇ ತೊಡಗಿಸಿಕೊಳ್ಳಬೇಕು.

ಜಿಲ್ಲಾ ಮಟ್ಟದ ಸಂಪನ್ಮೂಲದ ಬೆಂಬಲವನ್ನು ಡಿ ಐ ಇ ಟಿಗಳ ಮುಖಾಂತರ ಬ್ಲಾಕ್ ಮತ್ತು ಕ್ಲಸ್ಟರ್ ಮಟ್ಟದವರೆಗೆ ಪಡೆಯುವ ಪ್ರಯತ್ನ ಮಾಡಬೇಕು. ಗುಣಾತ್ಮಕ ಬೆಳವಣಿಗೆಗಾಗಿ ಸಂಪನ್ಮೂಲಗಳನ್ನು ಸೂಕ್ತ ರೀತಿಯಲ್ಲಿ ಹಂಚಿಕೊಳ್ಳಲು ಶಿಕ್ಷಕ ತರಬೇತಿ ಸಂಸ್ಥೆಗಳ ಸಂಪರ್ಕಜಾಲವೊಂದನ್ನು ಸ್ಥಾಪಿಸಬೇಕು.ಶಿಕ್ಷಕರ ಶಿಕ್ಷಣದ ಕಾರ್ಯಕ್ರಮಗಳ, ಸೇವಪೂರ್ವಾವಧಿಯ, ಸೇವಾವಧಿಯ ಜೀವನ ಪರ್ಯಂತರ ಮತ್ತು ನಿರಂತರ ಶಿಕ್ಷಣದ ಮತ್ತು ವೃತ್ತಿಪರ ಬೆಳವಣಿಗೆಯ ಕಾರ್ಯಕ್ರಮಗಳ ಉಸ್ತುವಾರಿ ಮತ್ತು ಮೌಲ್ಯಮಾಪನಗಳನ್ನು ಏರ್ಪಡಿಸಬೇಕು.ಇವು ಶಿಕ್ಷಣ ಸಂಸ್ಥೆಗಳ ಸ್ಥಾನ–ಮಾನ ನಿರ್ದೇಶನ ಅವರ ಸಾಮರ್ಥ್ಯಗಳನ್ನು ಹೆಚ್ಚಿಸುವುದರಲ್ಲಿ ಸಹಾಯಮಾಡುತ್ತವೆ.

ಶಾಲೆಗಳಲ್ಲಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನಗಳ ಸಮನ್ವಯಗೊಳಿಸುವುದರ ಬಗ್ಗೆ ಗಂಭೀರವಾದ ಗಮನವನ್ನು ನೀಡಬೇಕಾಗಿದೆ. ಅಧ್ಯಾಪಕರುಗಳು, ಶಿಕ್ಷಣವೇತ್ತರು,ವ್ಯಾಸಂಗಕ್ರಮ ರಚನಾಕಾರರು, ಮೌಲ್ಯಮಾಪಕರು ಮತ್ತು ಇತರರು ತಮ್ಮ ಪಾತ್ರಗಳನ್ನು ಪುನರ್ ವ್ಯಾಖ್ಯಾನಗೊಳಿಸಿಕೊಳ್ಳುವುದರ ಮೂಲಕ ಸಮೃದ್ಧವಾಗಿ ಬೆಳೆಯುತ್ತಿರುವ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದ ಪೂರ್ಣ ಸಾಮರ್ಥ್ಯವು ವಿದ್ಯಾರ್ಥಿಗಳ ಲಾಭಕ್ಕೆ ದೊರಕುವಹಾಗೆ ನೋಡಿಕೊಳ್ಳಬೇಕು.

ರಾಷ್ಟ್ರ ಮತ್ತು ರಾಜ್ಯಮಟ್ಟದ ಸಂಸ್ಥೆಗಳ ನಡುವೆ ಹಾಗೂ ಉದ್ಯೋಗ ವಲಯ ಹಾಗೂ ಉದ್ಯಮಶೀಲತೆ ಇವುಗಳ ಮಧ್ಯೆ ಲಂಬಾತ್ಮಕ ಹಾಗೂ ಸಮಾನಾತ್ಮಕ ಸಂಪರ್ಕವನ್ನು ಸ್ಥಾಪಿಸುವುದು ಅಗತ್ಯ. ಸಂಶೋಧನೆಗಳು, ಸರ್ವೇಕ್ಷಣಗಳು ಮತ್ತು ಹೊಸ ಅನ್ವೇಷಣೆಗಳು ವೃತ್ತಿಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಬೇಕಾಗುತ್ತದೆ.ವೃತ್ತಿ ಶಿಕ್ಷಣದ ಗುರಿಯನ್ನು ಸಮರ್ಥ ಅಧ್ಯಾಪಕರುಗಳನ್ನು ತಯಾರುಮಾಡಿ ಬಳಸಿಕೊಳ್ಳುವುದರ ಮೂಲಕ, ಕುಶಲ ಕಲಾಕಾರರ ರೂಪದಲ್ಲಿ ಸ್ಥಳೀಯ ಸಮುದಾಯದ ಬೆಂಬಲ ಪಡೆದುಕೊಳ್ಳುವುದರ ಮೂಲಕ, ನಿರ್ದಿಷ್ಟ ಪಠ್ಯಕ್ರಮಕ್ಕೆ ಸಂಪನ್ಮೂಲಗಳನ್ನು ಪಡೆದುಕೊಳ್ಳುವುದರ ಮೂಲಕ ಮತ್ತು ಸೂಕ್ತ ಬೋಧನಾ ಮತ್ತು ಕಲಿಕಾ ಸಾಮಗ್ರಿಗಳನ್ನು ಬಳಸಿಕೊಳ್ಳುವುದರ ಮೂಲಕ ಸಾಧಿಸಬಹುದು. ಹೊಸದಾಗಿ ಮೂಡುತ್ತಿರುವ ಉದ್ಯೋಗ ಮತ್ತು

ಉದ್ಯಮಶೀಲತೆಯ ಬಗ್ಗೆ ಸರಿಯಾದ ತಿಳುವಳಿಕೆ ಮತ್ತು ಒಡನಾಟ ಕೂಡ ಬೇಕಾಗುತ್ತದೆ. ಪ್ರೌಢಶಾಲೆಗಳು ವೃತ್ತಿಪರ ಕ್ಷೇತ್ರಗಳ ಸಾಧ್ಯತೆ ಮತ್ತು ಮಾರ್ಗಗಳ ಬಗ್ಗೆ ಆವಶ್ಯಕ ಮಾಹಿತಿಯನ್ನು ವಿದ್ಯಾರ್ಥಿಗಳಿಗೆ ಮತ್ತು ಪೋಷಕರಿಗೆ ನೀಡುವಂತಾಗಬೇಕು. ಪ್ರೌಢಶಾಲಾಮಟ್ಟದಲ್ಲಿ ವೃತ್ತಿಪರಶಿಕ್ಷಣವನ್ನು ನೀಡುವ ಎಲ್ಲ ಶಿಕ್ಷಣ ಸಂಸ್ಥೆಗಳಲ್ಲಿ ವೃತ್ತಿಶಿಕ್ಷಣ ಪೂರ್ವಕೋರ್ಸ್ ಒಂದನ್ನು ಆರಂಭದಲ್ಲಿಯೇ ಪ್ರಾರಂಭಿಸಬೇಕು.ಬ್ಲಾಕ್ ಮಟ್ಟದ ತರಬೇತಿ ಸಂಸ್ಥೆಗಳು, ವಿವಿಧ ನಿರ್ದಿಷ್ಟ ಗುಂಪುಗಳ ಆವಶ್ಯಕತೆಗಳಿಗನುಗುಣವಾಗಿ ಆಯ್ಕೆಯ ವಿಷಯದಲ್ಲಿ ಸ್ವಾತಂತ್ರ್ಯವುಳ್ಳ ಘಟಕೀಕೃತ ಮತ್ತು ಸಾಮರ್ಥ್ಯಾಧಾರಿತವಾದ ವೃತ್ತಿ ಶಿಕ್ಷಣವನ್ನು ಮತ್ತು ನೆರೆಯ ಸಂಸ್ಥೆಗಳಿಗೆ ಸಂಪನ್ಮೂಲ ಸಹಾಯವನ್ನು ಒದಗಿಸಿ ಬಹುಮುಖ ಪಾತ್ರ ನಿರ್ವಹಿಸುತ್ತವೆ.

ಮೌಲ್ಯ ಬೆಳವಣಿಗೆಗೆ ಹೆಚ್ಚಿನ ಪ್ರಾಮುಖ್ಯ ನೀಡಬೇಕು. ಪ್ರತಿಯೊಬ್ಬ ಶಿಕ್ಷಕನೂ ಮೌಲ್ಯಗಳ ಶಿಕ್ಷಕನಾಗಿರಬೇಕು. ಪ್ರತಿಯೊಂದು ಚಟುವಟಿಕೆ, ಘಟಕ ಮತ್ತು ಪರಸ್ಪರ ಸಮಾಲೋಚನೆಗಳನ್ನು ಮೌಲ್ಯಗಳ ಲಕ್ಷಣ, ಬೆಳವಣಿಗೆ ಮತ್ತು ಪುನರ್ಮನನದ ಮೂಲಕ ಪರೀಕ್ಷಿಸಿ ನ್ಯಾಯಯುತ ಅನುಷ್ಠಾನಕ್ಕೆ ಸೂಕ್ತ ಮಾರ್ಗೋಪಾಯಗಳನ್ನು ಕಂಡುಕೊಳ್ಳಬೇಕು. ಶಾಲೆಗಳ ಗುರಿಗಳನ್ನು ಸ್ಪಷ್ಟವಾಗಿ ನಿರ್ವಚಿಸಬೇಕು ಹಾಗೂ ಅಧ್ಯಾಪಕರ ಮತ್ತು ವಿದ್ಯಾರ್ಥಿಗಳ ಭಾಗವಹಿಸುವಿಕೆಯ ಮೂಲಕ ಶಿಸ್ತನ್ನು ರೂಪಿಸಿಕೊಳ್ಳಬೇಕು. ಪ್ರತಿಯೊಂದು ಶಾಲೆಯ ಬೆಳಗಿನ ಪ್ರಾರ್ಥನಾ ಸಮಾವೇಶದಲ್ಲಿ ಮೌಲ್ಯವನ್ನು ಬೆಳೆಸುವುದರ ಕಡೆ ಗಮನಹರಿಸಬೇಕು. ಸಾಧುಸಂತರ ಜೀವನ ಮತ್ತು ಬೋಧನೆಯ ಬಗ್ಗೆ ಆಸಕ್ತಿಯುತ ಕತೆಗಳನ್ನು ಹೇಳುವುದು, ಬೇರೆ ಬೇರೆ ಪವಿತ್ರ ಗ್ರಂಥಗಳಿಂದ ಉದ್ಧರಿಸುವುದು, ಜ್ಞಾನ ಸಂಪದ್ಭರಿತ ಗ್ರಂಥಗಳಿಂದ ವಾಚಿಸುವುದು, ಜಗತ್ತಿನ ಎಲ್ಲ ಪ್ರಮುಖ ಧರ್ಮಗಳ ಬೋಧನೆಯನ್ನು ತಿಳಿಸುವುದು ಮತ್ತು ಧ್ಯಾನಗಳನ್ನು ವಿದ್ಯಾರ್ಥಿಗಳ ವಯೋಮಾನಕ್ಕೆ ತಕ್ಕಂತೆ ಅಳವಡಿಸುವುದು. ಸಮುದಾಯ ಗೀತೆಗಳು ರಾಷ್ಟ್ರೀಯ ಭಾವೈಕ್ಯತಾ ಶಿಬಿರ, ಎನ್ ಎಸ್ ಎಸ್, ಎನ್ ಸಿ ಸಿ, ಆಟ ಮತ್ತು ಕ್ರೀಡೆಗಳು, ಸ್ಕೌಟ್, ಗೈಡಿಂಗ್ ಮತ್ತು ರೆಡ್‌ಕ್ರಾಸ್‌ಗಳನ್ನು ಸೂಕ್ತವಾಗಿ ·ಪರಿಚಯಿಸುವುದು. ಪ್ರಮುಖ ಧಾರ್ಮಿಕ ಮತ್ತು ಸಾಂಸ್ಕೃತಿಕ ಪಂಗಡಗಳ ಹಬ್ಬಗಳೆಂದು ಸಾಂಸ್ಕೃತಿಕ ಚಟುವಟಿಕೆಗಳು, ನಾಟಕಗಳು, ಚರ್ಚಾ ಸ್ಪರ್ಧೆಗಳು ಮತ್ತು ಜಂಟೀ ಉತ್ಸವಗಳನ್ನು ಏರ್ಪಡಿಸುವುದು – ಇವುಗಳ ಕಡೆಗೆ ವಿಶೇಷ ಗಮನವನ್ನು ನೀಡಬೇಕು. ಮೌಲ್ಯ ಶಿಕ್ಷಣದ ಗುರಿಯೆಂದರೆ, ಸಹನೆ ಮತ್ತು ಸಹಬಾಳ್ವೆಯನ್ನು ಸೃಷ್ಟಿಸುವ ದೃಷ್ಟಿಯಿಂದ ಪರಸ್ಪರರಲ್ಲಿ ಉತ್ತಮ ತಿಳುವಳಿಕೆ ಮೂಡಿಸುವುದು. ಇದರ ಸಾರ್ಥಕತೆ ನಿಂತಿರುವುದು ಅಧ್ಯಾಪಕರ, ಸಾಮಗ್ರಿಗಳ ಹಾಗೂ ಮಧ್ಯಂತರ ಮಾರ್ಗೋಪಾಯಗಳ ಮೇಲೆ. ಆದ್ದರಿಂದ ಅವುಗಳನ್ನು ಎಚ್ಚರಿಕೆಯಿಂದ ಆಯ್ದುಕೊಳ್ಳಬೇಕು.

ವಿಶೇಷ ಆವಶ್ಯಕತೆ ಇರುವ ವಿದ್ಯಾರ್ಥಿಗಳನ್ನು ಶಿಕ್ಷಣದ ಮುಖ್ಯ ಧಾರೆಗೆ ತರುವುದು ಅಗತ್ಯ. ವಿದ್ಯಾರ್ಥಿ ಕೇಂದ್ರಿತ ಬೋಧನೆ, ಗುಂಪು ಕಲಿಕೆ, ಪರಸ್ಪರ ಸಹಕಾರೀ ಕಲಿಕೆ, ವಿಶೇಷ ಗುಂಪು ಕಲಿಕೆ ಇರುವ ಶಾಲೆಗಳಲ್ಲಿ ವಿಶೇಷ ಅಗತ್ಯತೆ ಇರುವ ವಿದ್ಯಾರ್ಥಿಗಳನ್ನು ಬೇರೆ ವಿದ್ಯಾರ್ಥಿಗಳ ಜತೆ ಬೆರೆಯುವಂತೆ ಮಾಡಬೇಕು. ವ್ಯಾಸಂಗಕ್ರಮದ ರಚನಕಾರರ, ಅಧ್ಯಾಪಕರ, ಬೋಧನಾ ಕಲಿಕಾಸಾಮಗ್ರಿಗಳ ತಯಾರಕರ ಮತ್ತು ಮೌಲ್ಯಮಾಪನ ಪರಿಣತರ ಕ್ರಿಯೆಗಳನ್ನು ಅವರವರ ಮಟ್ಟದಲ್ಲಿ ವ್ಯಾಖ್ಯಾನಿಸುವುದರಿಂದ ಮಾರ್ಗೋಪಾಯಗಳನ್ನು ಯಶಸ್ವಿಯಾಗಿ ಕಂಡುಕೊಳ್ಳುವುದಕ್ಕೆ ಸಹಾಯವಾಗುತ್ತದೆ. ವೃತ್ತಿಪರ ಶಿಕ್ಷಣದ ಮಾರ್ಗದರ್ಶನ ಮತ್ತು ಸಮಾಲೋಚನೆಗೆ ಹೆಚ್ಚುವರಿ ಪ್ರಾಧಾನ್ಯ ಬೇಕಾಗಬಹುದು. ಇವೆಲ್ಲಕ್ಕಿಂತ ಹೆಚ್ಚಾಗಿ ಸಕಲ ಸಜ್ಜಿತರಾದ ಕಾರ್ಯಕರ್ತರು ಪ್ರಯತ್ನಗಳನ್ನು ಹೆಚ್ಚು ಅರ್ಥವತ್ತಾಗಿಸಬಲ್ಲರು.

ಮೌಲ್ಯಮಾಪನದ ಮಾರ್ಗೋಪಾಯಗಳನ್ನು ಅನುಷ್ಠಾನಕ್ಕೆ ತರಲು, ಶೈಕ್ಷಣಿಕ ಬದಲಾವಣೆಯ ಬಗ್ಗೆ ಜನರಲ್ಲಿ ಸೂಕ್ತವಾದ ವಾತಾವರಣ ಸೃಷ್ಟಿಯ ಮೂಲಕ ಅರಿವನ್ನು ಉಂಟುಮಾಡಬೇಕಾಗಿದೆ. ಅರಿವನ್ನು ಮೂಡಿಸುವುದಕ್ಕೆ ಅನುಕೂಲವಾಗುವಂತೆ ಬೇರೆಬೇರೆ ಪರಿಕಲ್ಪನೆಗಳ ಬಗ್ಗೆ ಸಾಮಗ್ರಿಗಳನ್ನೂ, ಮೌಲ್ಯಮಾಪನ

ಪರಿಕರಗಳು ಹಾಗೂ ವಿಧಾನಗಳನ್ನೂ ಜನರಿಗೆ ದೊರಕುವಂತೆ ಮಾಡಬೇಕು. ಅಧ್ಯಾಪಕರಿಂದ ಹಿಡಿದು ನಿರ್ವಾಹಕ ಸಿಬ್ಬಂದಿಯವರೆಗೆ ಎಲ್ಲ ಕಾರ್ಯಕರ್ತರೂ ಪರಿಪೂರ್ಣ ಮಾಹಿತಿ ಸನ್ನದ್ಧರಾಗಿರಬೇಕು ಮತ್ತು ಅವರಿಗೆ ಎಲ್ಲ ನಿಟ್ಟಿನಿಂದಲೂ ಬೆಂಬಲ ದೊರೆಯಬೇಕು.

ಶಾಲೆಗಳು ತಮ್ಮವೇ ಆದ ಯೋಜನೆ ಮತ್ತು ಕಾರ್ಯತಂತ್ರಗಳನ್ನು ರೂಪಿಸಿಕೊಳ್ಳಬೇಕು. ಶಾಲಾವ್ಯವಸ್ಥೆಯ ಶಿಕ್ಷಣ ಮಂಡಲಿಗಳು ಸಹಾಯಕ ಪಾತ್ರವಹಿಸಬೇಕು. ಅವುಗಳು ಮೌಲ್ಯಮಾಪನ ಸಾಮಗ್ರಿಗಳ ಮತ್ತು ಪರಿಕರಗಳ ಮೂಲ ಮಾದರಿಗಳನ್ನು ಸಿದ್ಧಪಡಿಸಿ ಶಾಲೆಗಳಿಗೆ ಒದಗಿಸಬಹುದು. ಇವುಗಳ ಜೊತೆಗೆ ಶಾಲಾ ಮಂಡಲಿಗಳು ಶಿಕ್ಷಕರುಗಳಿಗೆ ವಿಷಯ ಪುನರ್ಮನನ ಶಿಬಿರಗಳನ್ನು ಏರ್ಪಡಿಸಬಹುದು. ಸಂಶೋಧನಾ ಚಟುವಟಿಕೆ ಕೈಗೊಂಡು ಅದರ ಫಲಿತಾಂಶವನ್ನು ಬೇರೆಯವರ ಗಮನಕ್ಕೆ ತರಬಹುದು. ಶಾಲೆಗಳಿಗೆ ಸೂಕ್ತ ಬೋಧನಾ ಕಲಿಕಾ ಸಾಮಗ್ರಿಗಳನ್ನು ತಯಾರುಮಾಡಿಕೊಳ್ಳುವುದಕ್ಕೆ, ಅವುಗಳನ್ನು ಅಳವಡಿಸಿಕೊಳ್ಳುವುದಕ್ಕೆ ಬೇಕಾದ ಮಾರ್ಗೋಪಾಯಗಳನ್ನು ಸೂಚಿಸುವುದಕ್ಕೆ ಹಾಗೂ ಮೌಲ್ಯಮಾಪನ ವಿಧಾನಗಳನ್ನು ಅನುಸರಿಸುವುದಕ್ಕೆ ಬೇಕಾದ ಸಹಾಯ ಮತ್ತು ಮಾರ್ಗದರ್ಶನಗಳನ್ನು ನೀಡುವ ಜವಾಬ್ದಾರಿಯನ್ನು ರಾಜ್ಯ ಮತ್ತು ಜಿಲ್ಲಾಮಟ್ಟದ ಸಂಸ್ಥೆಗಳು ವಹಿಸಿಕೊಳ್ಳಬೇಕು.

ಸೇವಾಪೂರ್ವ ಶಿಕ್ಷಕರ ವ್ಯಾಸಂಗಕ್ರಮದಲ್ಲಿ ಮೌಲ್ಯಮಾಪನವನ್ನು ಒಂದು ಪ್ರಮುಖ ಅಂಗವನ್ನಾಗಿಸಬೇಕು. ಶಿಕ್ಷಕರ ಸೇವಾವಧಿಯ ಶಿಕ್ಷಣ ವ್ಯವಸ್ಥೆಯಲ್ಲಿಯೂ ಮೌಲ್ಯಮಾಪನ ಒಂದು ಶಕ್ತಿಯುತ ಅಂಗವಾಗಿರಬೇಕು.

ರಾಷ್ಟ್ರಮಟ್ಟದ ಸಂಸ್ಥೆಗಳಾದ ಎನ್ ಸಿ ಇ ಆರ್ ಟಿ , ಶಾಲಾ ಶಿಕ್ಷಣದ ಪರಿಷತ್ತಿನ ಮಂಡಲಿಗಳು ಮತ್ತು ಹೊಸದಾಗಿ ಪ್ರಾರಂಭಿಸಲು ಸೂಚಿಸಲಾಗಿರುವ ರಾಷ್ಟ್ರೀಯ ಮೌಲ್ಯಮಾಪನ ಸಂಸ್ಥೆ ಇವುಗಳು ನಿರೀಕ್ಷಿತ ಮಟ್ಟದ ಸಾಧನೆಯನ್ನು ಸಾಧಿಸಲು, ಪರಿಕಲ್ಪನೆಯ ಸಾಮಗ್ರಿಗಳನ್ನು ಮತ್ತು ಪರೀಕ್ಷಣಗಳನ್ನು ಅಭಿವೃದ್ಧಿಪಡಿಸಲು, ಮೌಲ್ಯಮಾಪನ ಸಂಶೋಧನೆ ಕೈಗೊಳ್ಳಲು, ಸಾಧನಾ ಸರ್ವೇಕ್ಷಣಗಳನ್ನು ಕೈಗೊಳ್ಳಲು ಹಾಗೂ ಇವೆಲ್ಲದರ ಫಲಿತಾಂಶಗಳನ್ನು ಪ್ರಚುರಪಡಿಸಲು ತಮ್ಮನ್ನು ತಾವು ಅರ್ಪಿಸಿಕೊಳ್ಳಬೇಕು.

ಉನ್ನತ ಪ್ರೌಢಶಿಕ್ಷಣದ ಮಟ್ಟದಲ್ಲಿ ಶೈಕ್ಷಣಿಕ ಮತ್ತು ವೃತ್ತಿ ಶಿಕ್ಷಣ ಮಾರ್ಗದರ್ಶನದ ಸೂಕ್ತ ಅವಕಾಶವಿರಬೇಕೆಂಬುದನ್ನು ನಿಃಸಂದಿಗ್ಧವಾಗಿ ಒತ್ತಿ ಹೇಳಲಾಗಿದೆ.

ಶಾಲಾಶಿಕ್ಷಣದ ಗುಣಾತ್ಮಕ ಅಭಿವೃದ್ಧಿಗೆ ಬೇರೆಬೇರೆ ಹಂತಗಳಲ್ಲಿ, ಅಂದರೆ , ರಾಷ್ಟ್ರ, ರಾಜ್ಯ, ಜಿಲ್ಲೆ ಮತ್ತು ಸ್ಥಳೀಯ (ಗ್ರಾಮ/ ಪಂಚಾಯಿತಿ/ ಪಟ್ಟಣ) ಮಟ್ಟಗಳಲ್ಲಿ ವಲಯಗಳ ಮಧ್ಯೆ ಹಾಗೂ ವಲಯಗಳ ಒಳಗೆ ಬಲಯುತವಾದ ಸಂಪರ್ಕ ಬೇಕಾಗುತ್ತದೆ. ಪ್ರತಿಯೊಂದು ಹಂತದ ಗುರಿಗಳನ್ನು ಮತ್ತು ಜವಾಬ್ದಾರಿಗಳನ್ನು ಸ್ಪಷ್ಟ ಮಾತುಗಳಲ್ಲಿ ನಿರ್ವಚಿಸಿ ಆಯಾಯಾ ಹಂತಗಳಿಗೇ ಜವಾಬ್ದಾರಿಯನ್ನು ವಹಿಸುವುದು ಈಗಿನ ಆದ್ಯತೆಯಾಗಬೇಕು. ಇವುಗಳ ಮಧ್ಯೆ ಉತ್ತಮ ಸಮನ್ವಯವನ್ನು ಸಾಧಿಸಲು ರಾಜ್ಯ, ಜಿಲ್ಲೆ ಮತ್ತು ಸ್ಥಳೀಯ ಮಟ್ಟಗಳಲ್ಲಿ ಕ್ರಿಯಾಯೋಜನಾ ತಂಡವೊಂದನ್ನು ರೂಪಿಸಬಹುದು. ಈ ಕ್ರಿಯಾಯೋಜನಾ ತಂಡಗಳ ಅವಧಿ ಮೂರರಿಂದ ಐದು ವರ್ಷಗಳಾಗಿದ್ದು, ಗುರಿಯನ್ನು ಸಾಧಿಸಲು ಅವುಗಳಿಗೆ ಪೂರ್ಣ ಕ್ರಿಯಾಶೀಲ ಸ್ವಾಯತ್ತತೆಯಿರಬೇಕು. ಇವುಗಳು ಮೂಲಭೂತ ಸೌಕರ್ಯಗಳ ಅಗತ್ಯವನ್ನು ಅಳೆಯುವುದು, ಸಂಪನ್ಮೂಲಗಳನ್ನು ಕ್ರೋಡೀಕರಿಸಲು ಯೋಜನೆ ಸಿದ್ಧಪಡಿಸುವುದು, ಸೂಕ್ತ ಮಧ್ಯಮಾವಧಿ ಪರಿಹಾರಗಳನ್ನು ಸೂಚಿಸುವುದರ ಜೊತೆಗೆ, ಬದಲಾವಣೆ

ಕಂಡುಬರುವ ಕಾರ್ಯಕ್ರಮದ ಮೇಲ್ವಿಚಾರಣೆ, ಉಸ್ತುವಾರಿ ಮತ್ತು ಮೌಲ್ಯಮಾಪನ ಮಾಡುತ್ತಾ ಸರ್ಕಾರ ಮತ್ತು ಸಮುದಾಯದ ಮಧ್ಯೆ ಸಂಪರ್ಕ ಸೇತುವೆಯಾಗಿ ಕೆಲಸ ಮಾಡುತ್ತವೆ.

ಎಲ್ಲ ಶಾಲೆಗಳಲ್ಲಿ ಮತ್ತು ಪರ್ಯಾಯ ಶಾಲಾ ಕೇಂದ್ರಗಳಲ್ಲಿ ವ್ಯಾಸಂಗಕ್ರಮದ ಪರಿಣಾಮಕಾರೀ ಅನುಷ್ಠಾನಕ್ಕೆ ಕನಿಷ್ಠ ಅವಶ್ಯ ಸೌಲಭ್ಯಗಳನ್ನು ಒದಗಿಸಿಕೊಡುವುದು ಅತಿ ಆವಶ್ಯಕ. ಐದನೇ ಪಂಚವಾರ್ಷಿಕ ಯೋಜನೆಯಲ್ಲಿ ಈಗಾಗಲೇ ತಿಳಿಸಿರುವಂತೆ ರಾಷ್ಟ್ರವು ತನ್ನ ರಾಷ್ಟ್ರೀಯ ಸಮಗ್ರ ವರಮಾನದ ಶೇಕಡಾ ಆರರಷ್ಟು ಆದಾಯವನ್ನು ಶಿಕ್ಷಣಕ್ಕೆ ತೊಡಗಿಸಬೇಕು.

ಪ್ರತಿಯೊಂದು ಶಾಲೆಯೂ ಬೋಧನೆ ಮತ್ತು ಕಲಿಕೆಗೆ ಕನಿಷ್ಠ ಆವಶ್ಯಕತೆಗಳಾದ ಕೊಠಡಿಗಳಿರುವ ಶಾಲಾ ಕಟ್ಟಡ, ಕುಡಿಯುವ ನೀರು,ಶೌಚಾಲಯ, ಬೋಧನಾ ಸಾಮಗ್ರಿಗಳು ಮತ್ತು ಬೋಧನಾ ಸಾಧನಗಳನ್ನು ಪಡೆದಿರುವುದನ್ನು ಖಚಿತಪಡಿಸಿಕೊಳ್ಳಬೇಕು. ಇವುಗಳನ್ನು ಕಾಲದಿಂದ ಕಾಲಕ್ಕೆ ಸರ್ಕಾರ, ಸಮುದಾಯ ಮತ್ತು ಇನ್ನಿತರ ದಾನಿಗಳಿಂದ ಪಡೆದುಕೊಳ್ಳುವ ಪ್ರಯತ್ನ ಮಾಡಬೇಕು. ಅನಾವಶ್ಯಕ ವಿಳಂಬ ಮಾಡದಂತೆ ಅಗತ್ಯ ಇರುವಷ್ಟು ಶಿಕ್ಷಕರನ್ನು ಶಾಲೆಗಳಿಗೆ ಒದಗಿಸಬೇಕು. ಬೋಧನಾ ಅವಧಿ ಪೋಲಾಗದಂತೆ ನೋಡಿಕೊಳ್ಳಬೇಕು. ಬೋಧನೆಗೆ ತೊಂದರೆಯಾಗುವಂತೆ ಶಿಕ್ಷಕರಿಗೆ ಯಾವುದೇ ಹೆಚ್ಚುವರಿ ಕೆಲಸ ವಹಿಸಬಾರದು. ಅಗತ್ಯ ಇರುವಷ್ಟು ಬೋಧನಾ ಸಾಮಗ್ರಿಗಳನ್ನು ಪೂರೈಸಲೇಬೇಕು. ಸಂಪನ್ಮೂಲಗಳ ಬೆಂಬಲಗಳಾದ ಪ್ರಯೋಗಶಾಲೆ, ಪುಸ್ತಕ ಭಂಡಾರ ಮತ್ತು ಪರಿಕರಗಳು ಇತ್ಯಾದಿ ಬಹಳ ಆವಶ್ಯಕ. ಅವು ಬರೀ ಗುಣಮಟ್ಟದಿಂದಷ್ಟೇ ಅಗತ್ಯವಲ್ಲ. ಸಮಾನತೆಯ ದೃಷ್ಟಿಯಿಂದಲೂ ಅಷ್ಟೇ ಅಗತ್ಯವಾದುವುಗಳು.

ಉನ್ನತ ಪ್ರಾಥಮಿಕ ಹಂತದ ಪ್ರಥಮ ವರ್ಷದಿಂದಲೇ ನಿರ್ದಿಷ್ಟ ವಿಷಯಗಳಲ್ಲಿ ತರಬೇತಿ ಪಡೆದ ಶಿಕ್ಷಕರು ಬೇಕಾಗುತ್ತಾರೆ. ಶಿಕ್ಷಣ ಮತ್ತು ವೃತ್ತಿಶಿಕ್ಷಣ ಈ ಎರಡೂ ಧಾರೆಗಳಿಗೆ ಬೇಕಾದ ಅತಿ ಅವಶ್ಯ ಅಗತ್ಯಗಳನ್ನು ಉನ್ನತ ಪ್ರೌಢಶಾಲಾ ಹಂತದಿಂದಲೇ ಪೂರೈಸಬೇಕಾಗುತ್ತದೆ. ಇವೆಲ್ಲಕ್ಕಿಂತ ಹೆಚ್ಚಾಗಿ, ತರಬೇತಿ ಪಡೆದಿರುವ, ಶೈಕ್ಷಣಿಕ ಅರ್ಹತೆ ಇರುವ, ದಕ್ಷ ಮತ್ತು ನಿಷ್ಠ ಅಧ್ಯಾಪಕರುಗಳು ವ್ಯಾಸಂಗಕ್ರಮದ ಅನುಷ್ಠಾನವನ್ನು ಅತ್ಯಂತ ಯಶಸ್ವಿಯಾಗಿಸಬಲ್ಲರು.